**GOVERNMENT OF KARNATAKA**

**No. EP 32 TPU 2021** **Karnataka Government secretariat,**
**6th Floor, M.S Building**
**Bangalore, dated:12/05/2022**

**NOTIFICATION**

The draft of the following rules which the Government of Karnataka proposes to make in exercise of powers conferred by sub-section (1) of section 18 of Karnataka State Civil Services (Regulation of Transfers of Teachers) Act 2020 (Karnataka Act 4 of 2020) is hereby published as required by sub-section (1) of section 18 of the said Act, for the information of all persons likely to be affected thereby from the date of its publication in the official Gazette.

Whereas, the said Gazette was made available to the general public on 08.04.2022.

And, whereas objection and suggestion received in this behalf have been considered by the State Government.

Now, therefore, in exercise of the powers conferred by Karnataka Civil Service (Regulation of Principal and Lecturers transfer) Rules 2022 (Karnataka Act 4 of 2020) hereby makes the following rules, namely:-

**1. Title and commencement.**-(1) These rules may be called Karnataka State Civil Services (Regulation of Transfer of Principal and Lecturers) Rules, 2022.

(2) They shall come into force from the date of their final publication in the official Gazette.

**2. Definitions.-** (1) In these rules unless the context otherwise requires,-

(a) **'Act'** means the Karnataka State Civil services (Regulation of Transfer of Teachers) Act, 2020;

(b) **'Child'** means unmarried and dependent child of the Principal or Lecturer;

(c) **'Section'** means section of the Act;

(d) **'Vacant Posts'** means a post of a Principal and a Lecturer of a particular subject, as the case may be, which is vacant and is required as per norms specified by the Government from time to time.

(e) **Pupil – Lecturer ratio** shall be 160:1 for subjects with practicals and 320:1 for non practical subjects.

(f) **Work load means** number of teaching hours prescribed per lecturer i.e. 24 hours per week for subjects with practicals and 20 hours for subjects without practicals.

**For example:** Science subjects having two sections with 80 students each will have 08 hours for theory and 16 hours for practical (02 hours per batch of 20 students).

(g) **Minimum Period of service** means a continuous service of three years in a Government Pre University College.

(h) **Request Transfer** means permitting a Principal or a Lecturer to select place in the zone classified on basis of student strength.

(i) **Redeployment and Rationalization Transfer** means transfer of Lecturer from existing college where there is insufficient or no workload to a Government PU College where there is a vacancy or additional requirement due to additional work load based on student strength.

(j) **'Zone' means,** -

(i) Zone-A, consisting of areas falling within the limits of BBMP, all Mahanagara-Palikas and District Headquarters.

(ii) Zone-B, consisting of areas falling within the limits of all NagaraPalikas, Nagara-Sabha, Pura-Sabha, Pattana-Panchayat, notified areas, Town-Panchayath areas and Taluk Headquarters (Notified in the Karnataka Municipal Corporation Act 1976 (1977 of Karnataka Act – 14).

(iii) Zone-C, consisting of areas other than the areas falling under Zone-A and Zone-B.

(2) Words and expressions used but not defined in these rules shall have the same meaning assigned to them in the Act.

**3. Transfer Process Controlling Officer and Competent Authority. -** The Director of Pre University Education Department is the Transfer Process Controlling Officer and the Competent Authority for transfer of Principals and Lecturers.

**4. Weighted Score` of a Principal / Lecturer. –**

(a) Weighted Score of a Principal or Lecturer for the purpose of transfer = (Number of years of service rendered in C Zone X 3) + (Number of years of service rendered in B Zone X 2) + (Number of years of service rendered in A Zone X 1) + (Number of years of service rendered in present college beyond 3 years X 1).

(b) Weighted Score of a Lecturer for the purpose of transfer = (No of years of service rendered in C Zone X 3) + (No of years of service rendered in B Zone X 2) + (No of years of service rendered in A Zone X 1) + (No of years of service rendered in present college beyond 3 years X 1)

Note: Service of Six months (180 days) and above shall be treated as one full year of service. Service of less than Six months (180 days) shall be treated as `Zero` year of service.

(c) The weighted score shall be calculated based on the service details of the Principal / Lecturer up to December of the previous year as updated by the concerned Drawing and Disbursing Officer (hereinafter referred as DDO) on SATS or the Department Portal.

(d) (c) If the weighted score of any two Principal / Lecturers is same then the seniority is decided based on date of entry into service. If date of entry into service (as Principal / Lecturer) is also the same, then their seniority is decided based on the date of birth.

(e) The department shall under seal and sign of Joint Director (Admin), publish the provisional weighted score of all Principals / Lecturers on second Friday of January every year on its website. All Principals / Lecturers shall have option to apply for correction of their service details in case of any discrepancies in the weighted scores. The application for correction shall be made to the concerned DDO with valid documents. In case of Principal / Lecturer such applications shall be made through respective DDPU. A Principal / Lecturer may also file an objection regarding to the weighted score of other Principal / Lecturers by producing valid documents. The application for correction or objections may be made till 31st of January of that year. No application for correction or objection shall be entertained beyond the last date.

(f) The Joint Director (Admin) or any officer not below the rank of Deputy Director shall verify each application of correction or objection and pass a necessary order by accepting or rejecting the application with valid justifications and publish the same on the departmental website by 15th of February.

(g) After the order is passed by the Joint Director (Admin), he shall publish the final weighted scores on the website. Once the final weighted scores are published, the same shall be freezed till the completion of the transfer process.

(h) If the above process is not being completed in the month of January and February due to unavoidable reasons, the same shall be completed prior to the publication of transfer schedule.

**5. Transfer Limits.-** The transfer limit specified under sub-section (1) of section 7 of the Act shall be further divided into various category of transfers as follows, namely;-

| **Sl No** | **Type of Transfer** | **Sub-limit** |
|---|---|---|
| 1 | Request Transfer (General) (For Principals) | Ten Percent |
| 2 | Request Transfer (General) (For Lecturers) | Ten Percent (percentage of the working strength of concerned category of Lecturer in the relevant subject) |

Provided that, the Redeployment and transfer due to Rationalization of Lecturer Transfer (Excess Transfer) and mutual transfers shall not be accounted for the purpose of the sub-limits.

**6. Transfer Schedule.-**(1) The transfers shall normally be taken up in the month of April and May of every year.

(2) The Government, on recommendations of the Transfer Process Controlling Officer if deems fit may permit the transfers to be taken up even after the time limit specified in sub-rule (1).

(3) Every year the Transfer Process Controlling Officer shall publish the time table for transfer process having the following major steps, namely:-

(a) Inviting application from Lecturers who were transferred through compulsory transfer during the year 2018-19 (Provided in the Act as one time measure only);

(b) Redeployment of sanctioned posts based on pupil Lecturer ratio;

(c) Notification of vacant posts;

(d) Notification of Draft list of Lecturers to be transferred under Rationalization;

(e) Inviting application for request transfer and exemption from Rationalization transfer;

(f) Finalization of `List of Lecturers who transferred on compulsory transfer during the year 2018-19`;

(g) Finalization of `List of Lecturers to be exempted` and `List of Lecturers to be given priority;

(h) Preparation and Publication of final list of Lecturers to be transferred under Rationalization;

(i) Transfer of Lecturers who transferred on compulsory transfer during the year 2018-19;

(j) Transfer of Lecturers under Rationalization;

(k) Notification of revised vacant posts along with deemed vacancies;

(l) Request transfers; and

(m) Mutual transfers.

NOTE: “Redeployment and Rationalization of Lecturers” shall be taken up every alternate year.

**7. Special Counseling.-** Whatever is contained in the said rules, before the first transfer process as per Karnataka Civil Services (Regulation of Teachers’ Transfer) (Second Amendment) Act, 2021 dated 18-01-2022 (hereafter called 2022 Ordinance 6), special counselling can be held as per the instructions detailed in the Ordinance dated 18-01-2022. Lecturers transferred

and reported on the basis of Compulsory Transfer held in the year 2018-19 may be given a place within the unit of seniority. Lecturers must be given a chance to choose place within the unit of seniority as one time measure before all other forms of transfers, subject to the availability of vacancies, in the following manner:

1) Authority which conducted Compulsory Transfer in the year 2018-19 will conduct current counselling process.

2) Transfer Controlling Officer will announce (issue) counselling timetable and guidelines.

3) Before announcing time table, list of available vacancies for Special Counselling must be announced.

4) Thereafter, online applications for Special Counselling may be invited from the affected Lecturers as explained in Compulsory Transfer in the year 2018- 19 Ordinance 6 of year 2022.

5) Affected Lecturers will have to submit request application for Special Counselling online.

6) Applications thus received online must be serialized as per their seniority on the basis of rules related to counselling order 2018-19 and must be finalized after receiving objections.

7) Affected Lecturers must be counseled based on their serial number in the seniority list. Lecturers must be given chance to choose place within the unit of seniority.

**8. Re-Deployment of Sanctioned post.-**Every alternate year the sanctioned posts shall be rationalized college wise depending on the student strength. The excess posts shall be redeployed to needy colleges as per the procedure notified by the Department for this purpose. After the completion of the process, the Director of Pre University Education Department shall issue orders with respect to sanctioned posts in each college for that academic year.

**9. Notification of vacant posts: -** After redeployment of posts, the Director of Pre University Education Department shall notify subject wise vacancy position.

**10. Notification of draft list of Lecturers to be transferred under Rationalization Transfer.-**The draft list of Lecturers to be transferred either

under Rationalization Transfer shall be notified by the Director of Pre University Education Department.-

(i) While preparing draft list of Lecturers to be transferred under Rationalization, if in a particular subject lecturer post in that college is in excess, then for such a post in such a subject "senior most' Lecturer of that subject working in that college shall be included in the list.

**11. Exemptions and Priorities.-** (1) Exemptions under rationalization transfers and priority for request transfers shall be complied on the basis of conditions specified in section 10.

(2) The certificates to be produced in claim of exemptions / provided further that priorities are as follows, namely:-

| Sl No | Exemption or Priority claim | Supporting documents |
|---|---|---|
| 1 | Principal / Lecturer or spouse or child suffering from terminal illness or Serious ailments for which treatment is not available within the taluk or Principal / Lecturer or spouse or children having disability of 40% or more | Certificate from the District Medical Board |
| 2 | Widow or 'Widower Principal / Lecturer with dependent children' | Death Certificate of the spouse and Magistrate Affidavit regarding not having remarried |
| 3 | Divorcee Principal / Lecturer with dependent children | Court decree and Magistrate Affidavit regarding dependent children and not having remarried. In case of Muslims Khula-Naama or Talaq-Naama or Talaq-emubarat issued by Masjid committee and Magistrate Affidavit regarding dependent children and not having remarried |
| 4 | Principal / Lecturer with spouse being current or former soldier or Permanently disabled or deceased soldier of Indian Defence Forces or Para military forces | Certificate from the Commanding Officer or the Director, Sainik Welfare Board |
| 5 | Principal / Lecturer being married to an employee of a | Certificate from the appointing authority of the spouse. |

| | | |
|---|---|---|
| | Central Government or State Government or Aided Institution | |
| 6 | Female Principal / Lecturers aged fifty years or Male Principal / Lecturers aged fifty five years | To be verified from SATS / Departmental Portal |
| 7 | Pregnant Principal / Lecturer or a female Principal / Lecturer with a child less than one year | Certificate from the District Medical Board |

**12. Inviting application for request transfer and exemption from Rationalization transfer.-**Every Principal / Lecturer who has completed minimum period of service shall be provided an opportunity to make an online application for request transfer and / or for exemption from Rationalization Transfer within the time limit notified by the Transfer Process Controlling Officer,-

(i) The Principal / Lecturer while making an application for request transfer can also seek priority under any of the categories specified in section 10 of the Act along with relevant documents under rule 11;

(ii) The application for exemption from Rationalization Transfer shall also be claimed online along with relevant documents specified in rule 11.

(iii) If the priority or exemption is not claimed within the time limit, then it shall not be considered at a later stage; and

(iv) Principals / Lecturers identified for transfer under Rationalization Transfers may also apply for Request Transfer. Their eligibility and weighted score shall be considered based on their working college prior to Rationalization Transfer.

**13. Finalization of `List of Principals / Lecturers to be exempted` and `List of Principal / Lecturers to be given priority.-**

(i) After the final date prescribed for making application for request transfer and application for exemptions under rationalization transfer, the Joint Director (Admin) of Pre University Education Department shall verify each application of priority or exemption.

(ii) The Joint Director (Admin) of Pre University Education Department shall come to conclusion of eligible cases of priority or exemption on the basis of submission of documents specified under rule 10.

(iii) If the Joint Director (Admin) of Pre University Education Department has any doubts regarding the authenticity or the genuineness of the documents, he shall cross verify with the Competent Authority.

(iv) the Director of Pre University Education Department shall publish online as well as on the office notice board

(a) draft eligible priority list;
(b) draft in-eligible priority list with reasons;
(c) draft eligible exempted list;
(d) draft ineligible exempted list with reasons;
(e) to give clear five working days for objections from any Principal / Lecturer;
(f) the Director of Pre University Education Department shall also mention the date for open hearing after the deadline fixed for raising objections in the notification; and
(g) no objections shall be entertained on `weighted score of a Principal / Lecturer` after clear five working days.

(v) Any Principal / Lecturer who has any objection to either eligible or ineligible cases may file an on-line objection with supporting documents.

(vi) The Director of Pre University Education Department or officer not below the rank of Joint Director of Pre University Education Department, shall verify all the online objections and hear them on the `open hearing date` and pass speaking orders. The speaking orders shall be published on the transfer portal and on the notice board.

(vii) After passing orders the Joint Director (Admin) of Pre University Education Department shall publish,-

(a) final Priority list; and

(b) final Exemption list.

(viii) Any Principal / Lecturer aggrieved by the order may approach the Grievance Redressal Committee as per section 9 within three working days from the date of publication of the order.

**14. Preparation and Publication of final list of Lecturers to be transferred under Rationalization.-**(1) After finalizing list of Lecturers to be exempted under Rationalization, the senior most Lecturer of that subject in the

college shall be considered for transfer under rationalization, excluding the Lecturers to be exempted. If all the Lecturers of that subject become eligible for exemption from rationalization, then the senior most Lecturer excluding Lecturers with Serious Illness or Physical Disability shall be considered, irrespective of exemption clause.

(2) After following due procedure laid down in sub-rule (1) the Director of Pre University Education Department shall publish final list of Lecturers to be transferred under Rationalization.

**15. Rationalization of Lecturers.-**(1) Order of priority shall be followed for transfer of Lecturer under rationalization.

(2) The Lecturers who are in the final list of Rationalization shall be transferred to the vacant posts available in zone C. If any Lecturer refuses to take the vacant post or abstains from process of counseling, the transfer authority shall transfer such Lecturer through dummy counseling after completion of counseling process.

(3) If `Serious Illness or Physical Disability`` Lecturers are identified as excess, then while transferring such Lecturers the transferring authority shall provide them first priority in the process of counseling irrespective of weighted score.

**16. Notification of revised vacant posts.-** In the year in which Rationalization is taken up, the Director of Pre University Education Department shall publish the subject-wise vacancies after Rationalization process.

**17. General Request transfers.-**

(i) Based on the applications received for the request transfers, final priority list for different categories as specified under section 10 of the Act and general category shall be prepared and published by the Competent Authority on the transfer portal.

(ii) Within each category the priority shall be decided based on the conditions prescribed for priority under section 10.

(iii) The total number of request transfers specified under clause (v) of section 10 and general transfers shall be within the transfer limits specified under rule 5.

(iv) The counseling for transfers shall be taken up in the sequence under clauses (i) to (v) of sub-section (1) of section 10 and general category.

(v) The Principals appearing for counseling may choose such a vacancy where the subject taught by him/her is there in that college. If such a vacancy is not available, then he/she may choose any vacancy. The Lecturers appearing for counseling may choose any vacancy. The transferring authority shall issue computer generated transfer order in the counseling centre itself. If no suitable vacancy is available the Principal / Lecturer may choose to continue in the existing post. An Undertaking to this effect from the Principal / Lecturer shall be taken by the transfer authority at the counseling centre itself. However, if vacancy is once chosen it shall not be modified or cancelled.

(vi) The counseling process will be conducted separately for Principals and Lecturers.

**18. Conduct of transfers. -** All transfers shall be carried out only through the online computerized counseling process.

**19. Completion of counseling. -** The exercise of transfer through computerized counseling process under Request transfers shall be continued till the upper limit of number of transfers under rule 5 is reached or till all the applicants are exhausted within the time frame communicated by the transfer Process Controlling Officer.

**20. Mutual transfers.-**

(i) Eligibility:

(a) Must have completed minimum seven years service.

(b) Must have a minimum balance service of five years before retirement.

(c) Must not have availed Mutual Transfer earlier.

(d) Both Principal/Lecturers seeking mutual transfer shall apply within the prescribed time on the Principal/Lecturer Transfer Portal in the manner specified by the Transfer Process Controlling Officer linking their applications through KGID numbers of each other.

(ii) The Competent Authority shall publish final list of eligible cases.

(iii) Mutual Transfer can be availed only once in the entire service of Principal/Lecturer.

**21. Issue of orders.-**The Competent Authority shall issue computer generated transfer order to the concerned Principal / Lecturer on the same day of the counseling.

**22. Display on the Notice Board. -** After completion of each type of transfer the list of the Principal / Lecturers transferred, indicating the places of transfers against their names shall also be displayed on the notice board. No transfer shall be made after the list is displayed.

**23. Responsibility of the Officers.-**The Competent Authority concerned shall ensure that the provisions of these rules are observed while effecting transfers and they shall be personally held responsible for any deviations and disciplinary action shall be taken to impose major penalty against such officers.

**24. Transfers after the general transfers. -** The Director of Pre University Education Department is empowered to affect the transfer of Principal / Lecturers during the academic year only in the following cases namely:- (i) transfer in lieu of suspension when disciplinary action are pending; (ii) after completion of general transfers if any of the posts specified remains vacant, the Government may post an eligible Principal / Lecturer as mentioned in rule-25; and (iii) the posts of Assistant Director in offices of the Director of Pre University Education Department.

**25. Public Interest transfers for places which have not been opted by any Lecturer if required. -** After completion of general transfers, where no Lecturer has opted for a place in the process of counseling and it is required to be filled based on student Lecturer ratio and in public interest, the State Government may transfer any Lecturer to such place who has completed minimum period of service subject to the following conditions namely;-

(i) such transfer is only from the Colleges having surplus Lecturers based on student Lecturers ratio;

(ii) such transfer shall be on the recommendation of the Director of Pre University Education;

(iii) The Competent Authority shall publish the list of vacancies to which nobody has opted during the process of counseling and to be filled in accordance with student Lecturer ratio under this rule immediately

after completion of general transfer. The Competent Authority shall make transfer to such vacancies so notified after completion of General transfers in accordance with this rule and any violation shall be viewed and treated seriously;

(iv) the Competent Authority shall maintain and publish the statistics of such surplus Lecturers, subject-wise and college wise; and

(v) Students Achievement Tracking System (SATS) data and the online portal data shall be utilized for assessing students and Lecturer strength and ratio between them and for other related statistical information prevailing in colleges.

**26. Repeal and Savings.-** The Karnataka State Civil Services (Regulation of transfer of Lecturers) Rules, 2017, are hereby repealed:

Provided that, such repeal shall not affect,-

(a) Anything done or any action taken under the said rules; or

(b) The previous operation of the said rules or anything duly done or suffered thereunder; or

(c) Any right, privilege, obligation or liability acquired, accrued or incurred under the said rules; or

(d) Any penalty or punishment incurred in respect of any offence committed under the said rules:

Provided further that, the provisions of section 6 of the Karnataka General Clauses Act, 1899 (Karnataka Act III of 1899) shall be applicable in respect of repeal of the said rules.

**BY ORDER AND IN THE NAME OF THE GOVERNOR OF KARNATAKA**

**(PADMINI S.N)**
Under Secretary to Government (Pre-university)
Department of Primary and Secondary Education

## ಕರ್ನಾಟಕ ಸರ್ಕಾರ

ಸಂಖ್ಯೆ:ಇಪಿ 32 ಟಿಪಿಯು 2021

ಕರ್ನಾಟಕ ಸರ್ಕಾರದ ಸಚಿವಾಲಯ
6ನೇ, ಮಹಡಿ, ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ:12-05-2022

# ಅಧಿಸೂಚನೆ

**ಕರ್ನಾಟಕ ಅಧಿಸೂಚನೆ ಸಂಖ್ಯೆ:ಇಡಿ 32 ಟಿಪಿಯು 2021 ದಿನಾಂಕ:12-05-2022 ಕನ್ನಡ ಅನುವಾದ ದಿನಾಂಕ:12-05-2022**

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ ) ಅಧಿನಿಯಮ 2020 (2020ರ ಕರ್ನಾಟಕ ಕಾಯಿದೆ ಸಂಖ್ಯೆ 01)ರ ವಿಭಾಗ 18ನೇ ಪ್ರಕರಣದ(1)ನೇ ಉಪ ಪ್ರಕರಣದ ಮೂಲಕ ಪ್ರ ದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಮಾಡಲು ಉದ್ದೇಶಿಸಿರುವ ಈ ಮುಂದಿನ ನಿಯಮಗಳ ಕರಡನ್ನು ಸದರಿ ಅಧಿನಿಯಮದ 18ನೇ ಪ್ರಕರಣದ (1)ನೇ ಉಪ -ಪ್ರಕರಣದ ಮೂಲಕ ಅಗತ್ಯಪಡಿಸಲಾದಂತೆ, ಅದರಿಂದ ಭಾದಿತರಾಗಲು ಸಂಭವವಿರುವ ಎಲ್ಲಾ ವ್ಯಕ್ತಿಗಳ ಮಾಹಿತಿಗಾಗಿ ದಿನಾಂಕ :08-04-2022 ರಂದು ಪ್ರಕಟಿಸಿದೆ. ರಾಜ್ಯ ಪತ್ರದಲ್ಲಿ ಪ್ರ ಕಟಿಸಿದ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ ಬಾಧಿತರಾಗಬಹುದಾದ ಎಲ್ಲಾ ವ್ಯಕ್ತಿಗಳಿಂದ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಅಹ್ವಾನಿಸಿರುವುದರಿಂದ, ಸಾರ್ವಜನಿಕರಿಂದ ಸ್ವೀಕರಿಸಲಾದ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಸರ್ಕಾರವು ಪರಿಗಣಿಸಿದೆ;

ಈಗ, ಕರ್ನಾಟಕ ಸರ್ಕಾರವು ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಪ್ರಾಂಶುಪಾಲರುಗಳ ಮತ್ತು ಉಪನ್ಯಾಸಕರುಗಳ ವರ್ಗಾವಣೆ ನಿಯಂತ್ರಣ) ಅಧಿನಿಯಮ, 2022 ( ಕರ್ನಾಟಕ ಕಾಯಿದೆ ಸಂಖ್ಯೆ 04/2020)ರ ವಿಭಾಗ 18ನೇ ಪ್ರಕರಣದ (1)ನೇ ಉಪ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಈ ಮೂಲಕ ಈ ಮುಂದಿನ ನಿಯಮಗಳನ್ನು ರಚಿಸಿರುತ್ತದೆ , ಎಂದರೆ:

**1. ಶೀರ್ಷಿಕೆ ಮತ್ತು ಪ್ರಾರಂಭ .** (1) ಈ ನಿಯಮಗಳನ್ನು ಕರ್ನಾಟಕ ರಾಜ್ಯ ನಾಗರೀಕ ಸೇವೆಗಳು (ಪ್ರಾಂಶುಪಾಲರ ಮತ್ತು ಉಪನ್ಯಾಸಕರ ವರ್ಗಾವಣೆ ನಿಯಂತ್ರಣ ) ನಿಯಮಗಳು 2022 ಎಂದು ಕರೆಯಲಾಗುವುದು.

(2) ಕರ್ನಾಟಕ ರಾಜ್ಯ ಪತ್ರದಲ್ಲಿ ಅಂತಿಮವಾಗಿ ಪ್ರ ಕಟಣೆಗೊಂಡ ನಂತರ ಈ ನಿಯಮಗಳು ಜಾರಿಗೆ ಬರುತ್ತವೆ.

**2. ವ್ಯಾಖ್ಯಾನ.** (೧) ಈ ನಿಯಮಗಳಲ್ಲಿ ಸಂದರ್ಭಕ್ಕೆ ಅಗತ್ಯವಿಲ್ಲದ ಹೊರತು

**(ಅ) 'ಕಾಯ್ದೆ'** ಅರ್ಥ, ಕರ್ನಾಟಕ ರಾಜ್ಯ ನಾಗರೀಕ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಕಾಯ್ದೆ 2020;

**(ಆ) 'ಮಗು'** ಅರ್ಥ, ಪ್ರಾಂಶುಪಾಲರ ಮತ್ತು ಉಪನ್ಯಾಸಕರ ಅವಿವಾಹಿತ ಮತ್ತು ಅವಲಂಬಿತ ಮಕ್ಕಳು

**(ಇ) 'ಭಾಗ'** ಅರ್ಥ, ಈ ಕಾಯ್ದೆ ಭಾಗ

**(ಈ) 'ಖಾಲಿ ಹುದ್ದೆಗಳು '** ಅರ್ಥ ಸರ್ಕಾರವು ಕಾಲಕಾಲಕ್ಕೆ ನಿಯಮಾನುಸಾರ ಸೃಷ್ಟಪಡಿಸಿದ ಪ್ರಾಂಶುಪಾಲರು ಮತ್ತು ನಿರ್ದಿಷ್ಟ ವಿಷಯದ ಉಪನ್ಯಾಸಕರ ಖಾಲಿ ಹುದ್ದೆ ಆಗಿರುವುದು.

**(ಉ) 'ವಿದ್ಯಾರ್ಥಿ' ಉಪನ್ಯಾಸಕರ ಅನುಪಾತ'** ಪ್ರಾಯೋಗಿಕ ವಿಷಯಗಳಿಗೆ ಸಂಬಂಧಿಸಿದಂತೆ 160:1 ಮತ್ತು ಇತರ ವಿಷಯಗಳಿಗೆ 320:1

**(ಊ) 'ಕಾರ್ಯಭಾರ'** ಅರ್ಥ, ಪ್ರತಿ ಉಪನ್ಯಾಸಕರಿಗೆ ನಿಗಧಿಪಡಿಸಿರುವ ಬೋಧನಾ ಅವಧಿಗಳು, ಪ್ರಾಯೋಗಿಕ ವಿಷಯದ ಉಪನ್ಯಾಸಕರಿಗೆ ವಾರಕ್ಕೆ 24 ಗಂಟೆಗಳು ಮತ್ತು ಇತರ ವಿಷಯಗಳ ಉಪನ್ಯಾಸಕರಿಗೆ ವಾರಕ್ಕೆ 20 ಗಂಟೆಗಳು.

ಉದಾಹರಣೆ, ವಿಜ್ಞಾನ ವಿಷಯದ ಪ್ರತಿ ತರಗತಿಗೆ 80 ವಿದ್ಯಾರ್ಥಿಗಳ 2 ತರಗತಿಗಳಿಗೆ ಸೈದ್ಧಾಂತಿಕ 8 ಗಂಟೆಗಳು ಮತ್ತು ಪ್ರಾಯೋಗಿಕ 16 ಗಂಟೆಗಳು (20 ವಿದ್ಯಾರ್ಥಿಗಳ ಪ್ರತಿ ತಂಡಕ್ಕೆ 2 ಗಂಟೆಗಳು)

**(ಋ) 'ಕನಿಷ್ಠ ಸೇವಾವಧಿ '** ಅರ್ಥ ಒಂದು ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ನಿರಂತರವಾಗಿ ಮೂರು ವರ್ಷಗಳು ಸಲ್ಲಿಸಿರುವ ಸೇವೆ.

**(ಎ) 'ಕೋರಿಕೆ ವರ್ಗಾವಣೆ'** ಅರ್ಥ ವಿದ್ಯಾರ್ಥಿಗಳ ಆಧಾರದ ಮೇಲೆ ವಲಯವಾರು ಸ್ಥಳ ಆಯ್ಕೆ ಮಾಡಿಕೊಳ್ಳಲು ಪ್ರಾಂಶುಪಾಲರು ಅಥವಾ ಉಪನ್ಯಾಸಕರಿಗೆ ಅನುಮತಿ.

**(ಏ) 'ಮರುನಿಯೋಜನೆ ಮತ್ತು ತಾರ್ಕಿಕ ವರ್ಗಾವಣೆ '** ಅರ್ಥ ಹಾಲಿ ಕಾರ್ಯನಿರ್ವಹಿಸುತ್ತಿದ್ದು ಕಾರ್ಯಭಾರವಿಲ್ಲದ ಅಥವಾ ಕಡಮೆ ಕಾರ್ಯಭಾರವಿರುವ ಕಾಲೇಜಿನಿಂದ ಹುದ್ದೆ ಖಾಲಿ ಇರುವ ಅಥವಾ ವಿದ್ಯಾರ್ಥಿಗಳ ಸಂಖ್ಯಾನುಸಾರ ಸೃಷ್ಟಿಯಾಗಿರುವ ಹೆಚ್ಚುವರಿ ಕಾರ್ಯಭಾರ ವಿರುವ ಸರ್ಕಾರಿ ಪದವಿ ಪೂರ್ವ ಕಾಲೇಜಿಗೆ ಮಾಡುವ ವರ್ಗಾವಣೆ

**(ಐ) 'ವಲಯ'** ಅರ್ಥ

_ವಲಯ-ಎ:_ ಬಿಬಿಎಂಪಿಗಳು, ಎಲ್ಲಾ ಮಹಾನಗರ ಪಾಲಿಕೆಗಳು ಮತ್ತು ಜಿಲ್ಲಾ ಕೇಂದ್ರಕ್ಕೆ ಒಳಪಡುವ ಕಾಲೇಜುಗಳು

_ವಲಯ-ಬಿ:_ ನಗರಪಾಲಿಕೆ, ನಗರ ಸಭೆ , ಪುರಸಭೆ, ಪಟ್ಟಣ ಪಂಚಾಯತಿ , ಮತ್ತು ತಾಲೂಕು ಕೇಂದ್ರಕ್ಕೆ ಒಳಪಡುವ ಕಾಲೇಜುಗಳು (ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ 1976 (1822 ರ ಕರ್ನಾಟಕ ಕಾಯ್ದೆ -14)

_ವಲಯ-ಸಿ_ ವಲಯ-ಎ ಮತ್ತು ವಲಯ -ಬಿ ಇವುಗಳಿಗೆ ಸಂಬಂಧ ಪಡದಿರುವ ಕಾಲೇಜುಗಳು

**3. ಸಕ್ಷಮ ಪ್ರಾಧಿಕಾರ ಮತ್ತು ವರ್ಗಾವಣೆ ಪ್ರಕ್ರಿಯೆ ನಿಯಂತ್ರಣಾಧಿಕಾರಿ** . ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ , ಇವರು ಪ್ರಾಂಶುಪಾಲರು ಮತ್ತು ಉಪನ್ಯಾಸಕರ ವರ್ಗಾವಣೆ ಪ್ರಕ್ರಿಯೆಯ ಸಕ್ಷಮ ಪ್ರಾಧಿಕಾರ ಮತ್ತು ವರ್ಗಾವಣೆ ಪ್ರಕ್ರಿಯೆಯ ನಿಯಂತ್ರಣಾಧಿಕಾರಿಯಾಗಿರುತ್ತಾರೆ.

**4. ಪ್ರಾಂಶುಪಾಲರು / ಉಪನ್ಯಾಸಕರ ವರ್ಗಾವಣೆಗೆ ಅರ್ಹತಾದಾಯಕ ಅಂಕಗಳು.**

**(ಅ)** ಪ್ರಾಂಶುಪಾಲರು / ಉಪನ್ಯಾಸಕರ ವರ್ಗಾವಣೆಗೆ ಅರ್ಹತಾದಾಯಕ ಅಂಕಗಳು (ಸಿ ವಲಯದಲ್ಲಿ ಸೇವೆ ಸಲ್ಲಿಸಿದ ಒಟ್ಟು ವರ್ಷಗಳ ಸಂಖ್ಯೆ X 3) + ( ಬಿ ವಲಯದಲ್ಲಿ ಸೇವೆ

ಸಲ್ಲಿಸಿದ ಒಟ್ಟು ವರ್ಷಗಳ ಸಂಖ್ಯೆ X 2) + ( ಎ ವಲಯದಲ್ಲಿ ಸೇವೆ ಸಲ್ಲಿಸಿದ ಒಟ್ಟು ವರ್ಷಗಳ ಸಂಖ್ಯೆ X 1) + (ಪ್ರಸ್ತುತ ಕಾಲೇಜಿನಲ್ಲಿ 3 ವರ್ಷಗಳಿಗೂ ಮೀರಿ ಸಲ್ಲಿಸಿದ ಒಟ್ಟು ವರ್ಷಗಳ ಸಂಖ್ಯೆ X 1)

**(ಆ)** ಉಪನ್ಯಾಸಕರ ವರ್ಗಾವಣೆಗೆ ಅರ್ಹತಾದಾಯಕ ಅಂಕಗಳು (ಸಿ ವಲಯದಲ್ಲಿ ಸೇವೆ ಸಲ್ಲಿಸಿದ ಒಟ್ಟು ವರ್ಷಗಳ ಸಂಖ್ಯೆ X 3) + ( ಬಿ ವಲಯದಲ್ಲಿ ಸೇವೆ ಸಲ್ಲಿಸಿದ ಒಟ್ಟು ವರ್ಷಗಳ ಸಂಖ್ಯೆ X 2) + (ಎ ವಲಯದಲ್ಲಿ ಸೇವೆ ಸಲ್ಲಿಸಿದ ಒಟ್ಟು ವರ್ಷಗಳ ಸಂಖ್ಯೆ X 1) + (ಪ್ರಸ್ತುತ ಕಾಲೇಜಿನಲ್ಲಿ 3 ವರ್ಷಗಳಿಗೂ ಮೀರಿ ಸಲ್ಲಿಸಿದ ಒಟ್ಟು ವರ್ಷಗಳ ಸಂಖ್ಯೆ X 1)
ಸೂಚನೆ: ಆರು ತಿಂಗಳು (180 ದಿನಗಳು) ಮತ್ತು ಹೆಚ್ಚಿನ ಸೇವೆಯನ್ನು ಒಂದು ಪೂರ್ಣ ವರ್ಷ ಎಂದು ಹಾಗು ಆರು ತಿಂಗಳು (180 ದಿನಗಳು) ಕಡಿಮೆ ಅವಧಿಯ ಸೇವೆಯನ್ನು ಶೂನ್ಯ ಎಂದು ಪರಿಗಣಿಸಲಾಗುತ್ತದೆ.

**(ಇ)** ವೇತನ ಸೆಳೆದು ವಿತರಣೆ ಮಾಡುವ ಅಧಿಕಾರಿಯು (ಇನ್ನು ಮುಂದೆ DDO ಎಂದು SATS ನಲ್ಲಿ ಉಲ್ಲೇಖಿಸಲಾಗುತ್ತದೆ ) ವಿದ್ಯಾರ್ಥಿ ಸಾಧನೆಯ ಟ್ರ್ಯಾಕಿಂಗ್ ವ್ಯವಸ್ಥೆ (ವಿದ್ಯಾರ್ಥಿ ಸಾಧನಾ ಪಥ SATS ) ಅಥವಾ ಇಲಾಖಾ ಜಾಲತಾಣದಲ್ಲಿ ಕಳೆದ ವರ್ಷದ ಡಿಸೆಂಬರ್‌ವರೆಗೆ ನಮೂದಿಸಿರುವ ಸೇವಾ ವಿವರಗಳ ಆಧಾರದ ಮೇಲೆ ಅರ್ಹತಾದಾಯಕ ಅಂಕಗಳನ್ನು ಲೆಕ್ಕ ಹಾಕಲಾಗುತ್ತದೆ.

**(ಈ)** ಯಾವುದೇ ಇಬ್ಬರು ಪ್ರಾಂಶುಪಾಲರು / ಇಬ್ಬರು ಉಪನ್ಯಾಸಕರ ಅರ್ಹತಾದಾಯಕ ಅಂಕಗಳು ಒಂದೇ ಆಗಿದ್ದರೆ , ಅವರು ಸೇವೆಗೆ ಸೇರಿದ ದಿನಾಂಕದ ಆಧಾರದ ಮೇಲೆ ಹಿರಿತನವನ್ನು ನಿರ್ಧರಿಸಲಾಗುತ್ತದೆ . ಒಂದು ವೇಳೆ ಸೇವೆಗೆ ಸೇರಿದ ದಿನಾಂಕ (ಪ್ರಾಂಶುಪಾಲರು / ಉಪನ್ಯಾಸಕರಾಗಿ) ಸಹ ಒಂದೇ ಆಗಿದ್ದರೆ ಅಂತಹವರ ಹಿರಿತನವನ್ನು ಜನ್ಮ ದಿನಾಂಕದ ಆಧಾರದ ಮೇಲೆ ನಿರ್ಧರಿಸಲಾಗುತ್ತದೆ.

**(ಉ)** ಎಲ್ಲಾ ಪ್ರಾಂಶುಪಾಲರು ಮತ್ತು ಉಪನ್ಯಾಸಕರ ತಾತ್ಕಾಲಿಕ ಅರ್ಹತಾದಾಯಕ ಅಂಕಗಳನ್ನು ಪ್ರತಿ ವರ್ಷ ಜನವರಿಯ ಎರಡನೇ ಶುಕ್ರವಾರ ತನ್ನ ವೆಬ್ ಸೈಟ್‌ನಲ್ಲಿ ಇಲಾಖೆಯು ಜಂಟಿ ನಿರ್ದೇಶಕರ ಮುದ್ರೆ (ಆಡಳಿತ) ಮತ್ತು ಸಹಿಯೊಂದಿಗೆ ಪ್ರಕಟಿಸುವುದು. ಅರ್ಹತಾದಾಯಕ ಅಂಕಗಳಲ್ಲಿ ಯಾವುದೇ ವ್ಯತ್ಯಾಸಗಳಿದ್ದಲ್ಲಿ ಅಂತಹ ಎಲ್ಲಾ ಪ್ರಾಂಶುಪಾಲರು ಮತ್ತು ಉಪನ್ಯಾಸಕರು ತಮ್ಮ ಸೇವಾ ವಿವರಗಳ ತಿದ್ದುಪಡಿಗಾಗಿ ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ . ತಿದ್ದುಪಡಿಗಾಗಿ ಅರ್ಜಿಯನ್ನು ಸಂಬಂಧಪಟ್ಟ ವೇತನ ಸೆಳೆದು ವಿತರಣೆ ಮಾಡುವ ಅಧಿಕಾರಿಗೆ ಸಲ್ಲಿಸಬೇಕು . ಪ್ರಾಂಶುಪಾಲರು | ಉಪನ್ಯಾಸಕರ ಸಂದರ್ಭದಲ್ಲಿ ಅಂತಹ ಅರ್ಜಿಗಳನ್ನು ಆಯಾ ಉಪನಿರ್ದೇಶಕರ ಮೂಲಕ ಸಲ್ಲಿಸುವುದು . ಯಾವುದೇ ಪ್ರಾಂಶುಪಾಲರು / ಉಪನ್ಯಾಸಕರು ಇತರ ಪ್ರಾಂಶುಪಾಲರು / ಉಪನ್ಯಾಸಕರ ಅರ್ಹತಾದಾಯಕ ಅಂಕಗಳಿಗೆ ಸಂಬಂಧಿಸಿದಂತೆ ಆಕ್ಷೇಪಣೆಯನ್ನು ಸೂಕ್ತ ದಾಖಲೆಗಳೊಂದಿಗೆ ಸಲ್ಲಿಸಬಹುದು . ತಿದ್ದುಪಡಿ ಅಥವಾ ಆಕ್ಷೇಪಣೆಗಳಿಗೆ ಸಂಬಂಧಿಸಿದಂತೆ ಅರ್ಜಿ ಸಲ್ಲಿಸಲು ಆ ವರ್ಷದ ಜನವರಿ 31 ಅಂತಿಮ ದಿನವಾಗಿರುತ್ತದೆ. ಅಂತಿಮ ದಿನಾಂಕದ ನಂತರ ತಿದ್ದುಪಡಿ ಅಥವಾ ಆಕ್ಷೇಪಣೆಗಾಗಿ ಯಾವುದೇ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ.

**(ಊ)** ಜಂಟಿ ನಿರ್ದೇಶಕರ ಶ್ರೇಣಿ (ಆಡಳಿತ) ಅಥವಾ ಉಪ ನಿರ್ದೇಶಕರ ಶ್ರೇಣಿಗೆ ಕಡಿಮೆಯಿಲ್ಲದ ಯಾವುದೇ ಅಧಿಕಾರಿಯು ತಿದ್ದುಪಡಿ ಅಥವಾ ಆಕ್ಷೇಪಣೆಯ ಪ್ರತಿ

ಅರ್ಜಿಯನ್ನು ಪರಿಶೀಲಿಸಿ ಮತ್ತು ಸೂಕ್ತ ಸಮರ್ಥನೆಗಳೊಂದಿಗೆ ಅರ್ಜಿಯನ್ನು ಮಾನ್ಯ ಮಾಡುವ ಅಥವಾ ತಿರಸ್ಕರಿಸುವ ಮೂಲಕ ಅಗತ್ಯ ಆದೇಶವನ್ನು ಇಲಾಖೆಯ ಜಾಲತಾಣದಲ್ಲಿ ಫೆಬ್ರುವರಿ 15ರೊಳಗೆ ಪ್ರಕಟಿಸುವುದು.

**(ಋ)** ಇದಾದ ನಂತರ ಮಾನ್ಯ ಜಂಟಿ ನಿರ್ದೇಶಕರು (ಆಡಳಿತ) ಅಂತಿಮ ಅರ್ಹತಾದಾಯಕ ಅಂಕಗಳನ್ನು ಇಲಾಖೆಯ ಜಾಲತಾಣದಲ್ಲಿ ಪ್ರಕಟಿಸುವುದು, ಅಂತಿಮ ಅರ್ಹತಾದಾಯಕ ಅಂಕಗಳನ್ನು ಪ್ರಕಟಿಸಿದ ನಂತರ ವರ್ಗಾವಣೆ ಪ್ರಕ್ರಿಯೆಯು ಪೂರ್ಣಗೊಳ್ಳುವವರೆ ಯಾವುದೇ ಬದಲಾವಣೆಯನ್ನು ಮಾಡಲಾಗುವುದಿಲ್ಲ.

**(ಎ)** ಮೇಲಿನ ಪ್ರಕ್ರಿಯೆಯು ಅನಿವಾರ್ಯ ಕಾರಣಗಳಿಂದ ಜನವರಿ ಮತ್ತು ಫೆಬ್ರುವರಿ ತಿಂಗಳಲ್ಲಿ ಪೂರ್ಣಗೊಳ್ಳದಿದ್ದರೆ, ವರ್ಗಾವಣೆ ವೇಳಾಪಟ್ಟಿಯನ್ನು ಪ್ರಕಟಿಸುವ ಮೊದಲು ಅದನ್ನು ಪೂರ್ಣಗೊಳಿಸುವುದು.

**5. ವರ್ಗಾವಣೆ ಮಿತಿ ,** ವರ್ಗಾವಣೆ ಕಾಯ್ದೆ 7 ಉಪ-ವಿಭಾಗ 1ರಂತೆ ವಿವಿಧ ವರ್ಗದ ವರ್ಗಾವಣೆಗಳನ್ನು ಈ ಕೆಳಗಿನಂತೆ ವರ್ಗೀಕರಿಸಿ ಮಿತಿಗೊಳಿಸಿದೆ.

| ಕ್ರಮ ಸಂಖ್ಯೆ | ವರ್ಗಾವಣೆ ವಿಧ | ಮಿತಿ |
|---|---|---|
| 1 | ಪ್ರಾಂಶುಪಾಲರ ಕೋರಿಕೆ ವರ್ಗಾವಣೆ (ಸಾಮಾನ್ಯ) | ಶೇಕಡ ಹತ್ತು |
| 2 | ಉಪನ್ಯಾಸಕರ ಕೋರಿಕೆ ವರ್ಗಾವಣೆ (ಸಾಮಾನ್ಯ) | ಶೇಕಡ ಹತ್ತು (ಸಂಬಂಧಿತ ವಿಷಯದ ಉಪನ್ಯಾಸಕರ ಸಂಬಂಧಪಟ್ಟ ವರ್ಗದ ಕೆಲಸದ ಸಾಮರ್ಥ್ಯದ ಶೇಕಡಾವಾರು) |

ತಾರ್ಕಿಕ ವರ್ಗಾವಣೆ , ಮರುನಿಯೋಜನೆ (ಹೆಚ್ಚುವರಿ ವರ್ಗಾವಣೆ ) ಮತ್ತು ಪರಸ್ಪರ ವರ್ಗಾವಣೆಗಳನ್ನು ಈ ವರ್ಗಾವಾರು ಮಿತಿಗೊಳಿಸಿದ ವರ್ಗಾವಣೆಗೆ ಸೇರಿಸಿ ಲೆಕ್ಕಹಾಕುವಂತಿಲ್ಲ.

**6. ವರ್ಗಾವಣೆ ವೇಳಾಪಟ್ಟಿ. (1)** ವರ್ಗಾವಣೆಗಳನ್ನು ಸಾಮಾನ್ಯವಾಗಿ ಪ್ರತಿ ವರ್ಷದ ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ನಡೆಸಲಾಗುವುದು.
**(2)** ಈ ಸಮಯದ ನಂತರವೂ ವರ್ಗಾವಣೆಗಳನ್ನು ನಡೆಸುವುದು ವರ್ಗಾವಣೆ ಪ್ರಕ್ರಿಯ ನಿಯಂತ್ರಣಾಧಿಕಾರಿಯ ಸೂಕ್ತವೆಂದು ಭಾವಿಸಿ ಮಾಡಿದ ಶಿಫಾರಸುಗಳ ಮೇರೆಗೆ , ಸರ್ಕಾರವು ಉಪನಿಯಮ (1) ರನ್ವಯ ವರ್ಗಾವಣೆಗಳನ್ನು ನಡೆಸಲು ಅನುಮತಿ ಸಬಹುದು.

**(3)** ವರ್ಗಾವಣೆ ಪ್ರಕ್ರಿಯೆ ನಿಯಂತ್ರಣಾಧಿಕಾರಿಯು ಪ್ರತಿ ವರ್ಷ ಈ ಕೆಳಗಿನ ಪ್ರಮುಖ ಹಂತಗಳನ್ನೊಳಗೊಂಡಂತೆ ವರ್ಗಾವಣೆ ವೇಳಾಪಟ್ಟಿಯನ್ನು ಪ್ರಕಟಿಸುವುದು.

(ಅ) 2018-19 ರಲ್ಲಿ ಕಡ್ಡಾಯ ವರ್ಗಾವಣೆಯ ಮೂಲಕ ವರ್ಗಾವಣೆಗೊಂಡ ಉಪನ್ಯಾಸಕರಿಂದ ಅರ್ಜಿಯನ್ನು ಆಹ್ವಾನಿಸುವುದು (ವರ್ಗಾವಣೆ ಕಾಯ್ದೆಯನ್ವಯ ಒಂದು ಬಾರಿಯ ಕ್ರಮ ಮಾತ್ರ);

(ಆ) ವಿದ್ಯಾರ್ಥಿ-ಉಪನ್ಯಾಸಕರ ಅನುಪಾತದ ಆಧಾರದ ಮೇಲೆ ಮಂಜೂರಾದ ಹುದ್ದೆಗಳ ಮರುನಿಯೋಜನೆ;

(ಇ)ಖಾಲಿ ಹುದ್ದೆಗಳ ಅಧಿಸೂಚನೆ (ಪ್ರಕಟಣೆ);

(ಈ) ತಾರ್ಕಿಕ ವರ್ಗಾವಣೆಯಡಿಯಲ್ಲಿ ವರ್ಗಾವಣೆ ಮಾಡಬೇಕಾದ ಉಪನ್ಯಾಸಕರ ಕರಡು ಪಟ್ಟಿಯ ಅಧಿಸೂಚನೆ (ಪ್ರಕಟಣೆ);

(ಉ) ಕೋರಿಕೆ ವರ್ಗಾವಣೆ ಮತ್ತು ತಾರ್ಕಿಕ ವರ್ಗಾವಣೆ ವಿನಾಯಿತಿಗಾಗಿ ಅರ್ಜಿಯನ್ನು ಆಹ್ವಾನಿಸುವುದು;

(ಊ) 2018-19ನೇ ಸಾಲಿನಲ್ಲಿ ಕಡ್ಡಾಯ ವರ್ಗಾವಣೆಯ ಮೇಲೆ ವರ್ಗಾವಣೆಗೊಂಡ ಉಪನ್ಯಾಸಕರ ಪಟ್ಟಿಯ ಅಂತಿಮಗೊಳಿಸುವಿಕೆ;

(ಋ) ವಿನಾಯಿತಿ ನೀಡಬೇಕಾದ ಮತ್ತು ಆದ್ಯತೆಗೊಳಪಡುವ ಉಪನ್ಯಾಸಕರ ಪಟ್ಟಿಯನ್ನುಅಂತಿಮಗೊಳಿಸುವುದು;

(ಎ) ತಾರ್ಕಿಕ ವರ್ಗಾವಣೆ ಅಡಿಯಲ್ಲಿ ಮಾಡಬೇಕಾದ ಉಪನ್ಯಾಸಕರ ಅಂತಿಮ ಪಟ್ಟಿಯ ತಯಾರಿ ಮತ್ತು ಪ್ರಕಟಣೆ;

(ಏ) 2018-19ನೇ ಸಾಲಿನಲ್ಲಿ ಕಡ್ಡಾಯ ವರ್ಗಾವಣೆಯ ಮೇಲೆ ವರ್ಗಾವಣೆಗೊಂಡ ಉಪನ್ಯಾಸಕರ ವರ್ಗಾವಣೆ;

(ಐ)ತಾರ್ಕಿಕ ವರ್ಗಾವಣೆ ಅಡಿಯಲ್ಲಿ ಉಪನ್ಯಾಸಕರ ವರ್ಗಾವಣೆ;

(ಒ) ಖಾಲಿ ಎಂದು ಪರಿಭಾವಿಸಿದ ಹುದ್ದೆಗಳು ಸೇರಿದಂತೆ ಪರಿಷ್ಕೃತ ಖಾಲಿ ಹುದ್ದೆಗಳ ಪ್ರಕಟಣೆ;

(ಓ)ಕೋರಿಕೆ ವರ್ಗಾವಣೆಗಳು ಮತ್ತು;

(ಔ)ಪರಸ್ಪರ ವರ್ಗಾವಣೆಗಳು;

**ಸೂಚನೆ:** ಉಪನ್ಯಾಸಕರ ಮರುನಿಯೋಜನೆ ಮತ್ತು ತಾರ್ಕಿಕ ವರ್ಗಾವಣೆಗಳನ್ನು ಪ್ರತಿ ಪರ್ಯಾಯ ವರ್ಷದಲ್ಲಿ ನಡೆಸುವುದು.

**7. ವಿಶೇಷ ಸಮಾಲೋಚನಾ ವರ್ಗಾವಣೆ** , ಕರ್ನಾಟಕ ನಾಗರೀಕ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) (ಎರಡನೇ ತಿದ್ದುಪಡಿ) ಕಾಯಿದೆ, 2021 ದಿನಾಂಕ 18-01-2022 (ಇನ್ನು ಮುಂದೆ 2022 ಸುಗ್ರೀವಾಜ್ಞೆ (ಆರ್ಡಿನೆನ್ಸ್) 6 ಎಂದು ಕರೆಯಲಾಗುತ್ತದೆ), ಅನ್ವಯ ವರ್ಗಾವಣೆ ಪ್ರಕ್ರಿಯೆ ಪ್ರಾರಂಭಮಾಡುವುದಕ್ಕೆ ಮೊದಲು ದಿನಾಂಕ 18-01-2022 ರ ಸುಗ್ರೀವಾಜ್ಞೆಯಲ್ಲಿ ವಿವರಿಸಿದ ಸೂಚನೆಗಳನ್ವಯ ವಿಶೇಷ ಸಮಾಲೋಚನಾ ವರ್ಗಾವಣೆಯನ್ನು ನಡೆಸಬಹುದು . 2018-19ನೇ ಸಾಲಿನಲ್ಲಿ ಕಡ್ಡಾಯ ವರ್ಗಾವಣೆ ಆಧಾರದ ಮೇಲೆ ವರ್ಗವಾಗಿ ವರದಿ

ಮಾಡಿಕೊಂಡಿರುವ ಉಪನ್ಯಾಸಕರು ಘಟಕದೊಳಗೆ ಸ್ಥಳ ಆಯ್ಕೆ ಮಾಡಿಕೊಳ್ಳಲು ಅವಕಾಶ ನೀಡಬಹುದು. ಇತರ ಎಲ್ಲಾ ರೀತಿಯ ವರ್ಗಾವಣೆಗಳಿಗೆ ಮೊದಲು ಉಪನ್ಯಾಸಕರು ಖಾಲಿ ಹುದ್ದೆಗಳ ಲಭ್ಯತೆಗೆ ಒಳಪಟ್ಟು ಜೇಷ್ಠತಾ ಘಟಕದೊಳಗೆ ಸ್ಥಳವನ್ನು ಆಯ್ಕೆ ಮಾಡಿಕೊಳ್ಳಲು ಒಂದು ಬಾರಿ ಈಕೆಳಗಿನಂತೆ ಅವಕಾಶ ನೀಡಬೇಕು;

1) 2018-19 ರಲ್ಲಿ ಕಡ್ಡಾಯ ವರ್ಗಾವಣೆಯನ್ನು ನಡೆಸಿದ ಪ್ರಾಧಿಕಾರವು ಪ್ರಸ್ತುತ ಕೌನ್ಸೆಲಿಂಗ್ ಪ್ರಕ್ರಿಯೆಯನ್ನು ನಡೆಸುವುದು.

2) ವರ್ಗಾವಣೆ ನಿಯಂತ್ರಣಾಧಿಕಾರಿ ವರ್ಗಾವಣೆ ಸಮಾಲೋಚನಾ ವೇಳಾಪಟ್ಟಿ ಮತ್ತು ಮಾರ್ಗಸೂಚಿಗಳನ್ನು ಪ್ರಕಟಿಸುವುದು.

3) ವೇಳಾಪಟ್ಟಿಯನ್ನು ಪ್ರಕಟಿಸುವ ಮೊದಲು, ವಿಶೇಷ ಸಮಾಲೋಚನಾ ವರ್ಗಾವಣೆಗೆ ಲಭ್ಯವಿರುವ ಖಾಲಿ ಹುದ್ದೆಗಳ ಪಟ್ಟಿಯನ್ನು ಪ್ರಕಟಿಸುವುದು.

4) ನಂತರ, 2018-19ರ ಕಡ್ಡಾಯ ವರ್ಗಾವಣೆಯಲ್ಲಿ ಬಾಧಿತ ಉಪನ್ಯಾಸಕರಿಂದ ವಿಶೇಷ ಸಮಾಲೋಚನಾ ವರ್ಗಾವಣೆಗೆ 2022 ರ ಅಧ್ಯಾದೇಶ 6 ರನ್ವಯ ಆನ್ ಲೈನ್ ಅರ್ಜಿಗಳನ್ನು, ಆಹ್ವಾನಿಸಬಹುದು.

5) ಬಾಧಿತ ಉಪನ್ಯಾಸಕರು ಆನ್‌ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸಬೇಕು.

6) ಹೀಗೆ ಆನ್ ಲೈನ್‌ನಲ್ಲಿ ಸ್ವೀಕರಿಸಿದ ಅರ್ಜಿಗಳನ್ನು 2018-19ರ ಕೌನ್ಸೆಲಿಂಗ್ ಆದೇಶಕ್ಕೆ ಸಂಬಂಧಿಸಿದ ನಿಯಮಗಳ ಆಧಾರದ ಮೇಲೆ ಅವರ ಸೇವಾ ಜೇಷ್ಠತೆಯ ಅನುಸಾರ ಕ್ರಮವಾಗಿರಿಸಿ ಆಕ್ಷೇಪಣೆಗಳನ್ನು ಸ್ವೀಕರಿಸಿ ಆನಂತರ ಅಂತಿಮಗೊಳಿಸಬೇಕು.

7) ಜೇಷ್ಠತಾ ಪಟ್ಟಿಯಲ್ಲಿರುವ ಕ್ರಮಸಂಖ್ಯೆಯ ಆಧಾರದ ಮೇಲೆ ಬಾಧಿತ ಉಪನ್ಯಾಸಕರಿಗೆ ಸಮಾಲೋಚನಾ ವರ್ಗಾವಣೆ ಮಾಡಬೇಕು. ಉಪನ್ಯಾಸಕರಿಗೆ ಹಿರಿತನದ ಘಟಕದೊಳಗೆ ಸ್ಥಳವನ್ನು ಆಯ್ಕೆ ಮಾಡಲು ಅವಕಾಶ ನೀಡಬೇಕು.

**8. ಮಂಜೂರಾದ ಹುದ್ದೆಯ ಮರು -ನಿಯೋಜನೆ.** ಪ್ರತಿ ಪರ್ಯಾಯ ವರ್ಷ ಮಂಜೂರಾದ ಹುದ್ದೆಗಳನ್ನು ವಿದ್ಯಾರ್ಥಿಗಳ ಸಂಖ್ಯಾಬಲವನ್ನು ಅವಲಂಬಿಸಿ ಕಾಲೇಜುವಾರು ತಾರ್ಕಿಕವಾಗಿ ಅಂತಿಮಗೊಳಿಸಬೇಕು. ಇಲಾಖೆಯು ಸೂಚಿಸಿದ ಕಾರ್ಯವಿಧಾನದ ಪ್ರಕಾರ ಹೆಚ್ಚುವರಿ ಹುದ್ದೆಗಳನ್ನು ಅಗತ್ಯವಿರುವ ಕಾಲೇಜುಗಳಿಗೆ ಮರುಹಂಚಿಕೆ ಮಾಡಬೇಕು. ವರ್ಗಾವಣಾ ಪ್ರಕ್ರಿಯೆಯು ಪೂರ್ಣಗೊಂಡ ನಂತರ, ಪ್ರತಿ ಕಾಲೇಜಿನಲ್ಲಿ ಆ ಶೈಕ್ಷಣಿಕ ವರ್ಷಕ್ಕೆ ಮಂಜೂರಾದ ಹುದ್ದೆಗಳಿಗೆ ಸಂಬಂಧಿಸಿದಂತೆ, ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಇವರು ಆದೇಶಗಳನ್ನು ಹೊರಡಿಸುವುದು.

**9. ಖಾಲಿ ಹುದ್ದೆಗಳ ಪ್ರಕಟಣೆ**. ಮರುಹಂಚಿಕೆ ಮಾಡಿದ ನಂತರ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಇವರು ವಿಷಯವಾರು ಖಾಲಿ ಹುದ್ದೆಗಳ ವಿವರಗಳನ್ನು ಪ್ರಕಟಿಸುವುದು.

**10. ತಾರ್ಕಿಕ ವರ್ಗಾವಣೆಯ ಅಡಿಯಲ್ಲಿ ವರ್ಗಾವಣೆ ಮಾಡಬೇಕಾದ ಉಪನ್ಯಾಸಕರ**

**ಕರಡು ಪಟ್ಟಿಯ ಪ್ರಕಟಣೆ ,** ತಾರ್ಕಿಕ ವರ್ಗಾವಣೆಯ ಅಡಿಯಲ್ಲಿ ವರ್ಗಾವಣೆ ಮಾಡಬೇಕಾದ ಉಪನ್ಯಾಸಕರ ಕರಡು ಪಟ್ಟಿಯನ್ನು ನಿರ್ದೇಶಕರು , ಪದವಿ ಪೂರ್ವ ಶಿಕ್ಷಣ ಇಲಾಖೆ, ಇವರು ಪ್ರಕಟಿಸವುದು.

(i) ತಾರ್ಕಿಕ ವರ್ಗಾವಣೆಯ ಅಡಿಯಲ್ಲಿ ವರ್ಗಾವಣೆಗೊಳ್ಳುವ ಉಪನ್ಯಾಸಕರ ಕರಡು ಪಟ್ಟಿಯನ್ನು ಸಿದ್ಧಪಡಿಸುವಾಗ , ಕಾಲೇಜಿನಲ್ಲಿ ಒಂದು ವಿಷಯದ ಹುದ್ದೆಯು ಅಧಿಕವಾಗಿದ್ದರೆ, ಅಂತಹ ಹುದ್ದೆಗೆ ಆ ಕಾಲೇಜಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಆ ವಿಷಯದ ಹಿರಿಯ ಉಪನ್ಯಾಸಕರನ್ನು ಸೇರಿಸಲಾಗುತ್ತದೆ.

**11. ವಿನಾಯಿತಿ ಮತ್ತು ಆದ್ಯತೆಗಳು .** (1) ಭಾಗ 10 ರಲ್ಲಿ ಸ್ಪಷ್ಟಪಡಿಸಿರುವ ಶರತ್ತುಗಳ ಆಧಾರದನ್ವಯ ತಾರ್ಕಿಕ ವರ್ಗಾವಣೆ ಮತ್ತು ಆದ್ಯತೆಯ ಕೋರಿಕೆ ವರ್ಗಾವಣೆ ಅಡಿಯಲ್ಲಿನ ವಿನಾಯಿತಿಗಳನ್ನು ನೀಡಲಾಗುವುದು.

(2) ವಿನಾಯಿತಿ ಬಯಸಿ ಸಲ್ಲಿಸುವ ಪ್ರಮಾಣಪತ್ರ /ದಾಖಲೆಗಳನ್ನಾದರಿಸಿ ನೀಡುವ ಆದ್ಯತೆಗಳು ಈ ಕೆಳಗಿನಂತಿರುತ್ತವೆ. ಅವುಗಳೆಂದರೆ

| ಕ್ರ.ಸಂ | ಬಯಸಿದ ವಿನಾಯಿತಿ ಅಥವಾ ಆದ್ಯತೆ (ಹಕ್ಕುಕೋರಿಕೆ) | ಸಂಬಂದಪಟ್ಟ ದಾಖಲೆಗಳು |
|---|---|---|
| 1 | ಶೇಕಡ 40 / ಅದಕ್ಕೂ ಅಧಿಕ ಶಾರೀರಿಕವಾಗಿ ಅಸಮರ್ಥರಾದ , ಮಾರಣಾಂತಿಕ ಮತ್ತು ಗಂಭೀರ ಹಾಗು ತಾಲ್ಲೂಕಿನಲ್ಲಿ ಚಿಕಿತ್ಸೆ ಲಭ್ಯವಿಲ್ಲದ ಕಾಯಿಲೆಗಳಿಂದ ಬಳಲುತ್ತಿರುವ ಪ್ರಾಂಶುಪಾಲರು ಅಥವಾ ಉಪನ್ಯಾಸಕರು ಅಥವಾ ಸಂಗಾತಿಗಳು ಅಥವಾ ನೌಕರರ ಮಗು/ಮಕ್ಕಳು | ಜಿಲ್ಲಾ ವೈದ್ಯಕೀಯ ಮಂಡಳಿ ನೀಡಿದ ಪ್ರಮಾಣ ಪತ್ರ |
| 2 | ವಿಧವೆ ಅಥವಾ ವಿಧುರ ಪ್ರಾಂಶುಪಾಲರು / ಉಪನ್ಯಾಸಕರು ಸೇರಿದಂತೆ ಅವಲಂಬಿತ ಮಕ್ಕಳು | ಸಂಗಾತಿಯ ಮರಣ ಪ್ರಮಾಣಪತ್ರ ಮತ್ತು ಮರುಮದುವೆಯಾಗದಿರುವ ಬಗ್ಗೆ ಮ್ಯಾಜಿಸ್ಟ್ರೇಟ್ರುವರು ನೀಡಿದ ಅಫಿಡವಿಟ್ |
| 3 | ವಿಚ್ಛೇದನೆ ಪಡೆದ ಪ್ರಾಂಶುಪಾಲರು ಉಪನ್ಯಾಸಕರು ಅವಲಂಬಿತ ಮಕ್ಕಳು | ಅವಲಂಬಿತ ಮಕ್ಕಳ ಬಗ್ಗೆ ಮತ್ತು ಮರುಮದುವೆಯಾಗಿಲ್ಲದಿರುವ ಬಗ್ಗೆ ನ್ಯಾಯಾಲಯದ ತೀರ್ಪಿನ ಪ್ರತಿ ಮತ್ತು ಮ್ಯಾಜಿಸ್ಟ್ರೇಟ್ರುವರ ಅಫಿಡವಿಟ್ ಮುಸ್ಲಿಮರ ವಿಷಯದಲ್ಲಿ ಮುಸ್ಲಿಮರು ಖುಲಾ-ನಾಮಾ ಅಥವಾ ತಲಾಖ್ ನಾಮಾ ಅಥವಾ ತಲಾಖ್ -ಎ-ಮುಬಾರತ್ ಬಗ್ಗೆ ಮಸ್ಜಿದ್ ಸಮಿತಿಯ ದಾಖಲೆ ಮತ್ತು ಅವಲಂಬಿತ ಮಕ್ಕಳ ಬಗ್ಗೆ ಹಾಗು ಮರುಮದುವೆಯಾಗಿಲ್ಲದಿರುವ ಬಗ್ಗೆ ಮ್ಯಾಜಿಸ್ಟ್ರೇಟ್ರುವರ ಅಫಿಡವಿಟ್ |

| | | |
|---|---|---|
| 4 | ಭಾರತೀಯ ರಕ್ಷಣಾ ಪಡೆಗಳ ಅಥವಾ ಪ್ಯಾರಾ ಮಿಲಿಟರಿ ಪಡೆಗಳ ಸೈನಿಕರಾಗಿದ್ದು ಶಾಶ್ವತವಾಗಿ ಅಂಗವಿಕಲರಾಗಿರುವ ಅಥವಾ ಮೃತ ಸಂಗಾತಿ ಪ್ರಾಂಶುಪಾಲರು/ ಉಪನ್ಯಾಸಕರು | ನಿರ್ದೇಶಕರು, ಸೈನಿಕ ಕಲ್ಯಾಣ ಮಂಡಳಿ ಇವರು ಅಥವಾ ಕಮ್ಯಾಂಡಿಂಗ್ ಅಧಿಕಾರಿ ನೀಡುವ ಪ್ರಮಾಣ ಪತ್ರ |
| 5 | ಕೇಂದ್ರ ಸರ್ಕಾರಿ ಅಥವಾ ರಾಜ್ಯ ಸರ್ಕಾರಿ ಅಥವಾ ಅನುದಾನಿತ ಸಂಸ್ಥೆಯ ಉದ್ಯೋಗಿಯ ಸಂಗಾತಿಯಾದ ಪ್ರಾಂಶುಪಾಲರು/ಉಪನ್ಯಾಸಕರು | ನೇಮಕಾತಿ ಪ್ರಾಧಿಕಾರದಿಂದ ನೀಡಿದ ಪ್ರಮಾಣಪತ್ರ |
| 6 | ಐವತ್ತು ವರ್ಷ ವಯಸ್ಸಿನ ಮಹಿಳಾ ಪ್ರಾಂಶುಪಾಲರು / ಉಪನ್ಯಾಸಕರು ಮತ್ತು ಐವತ್ತೈದು ವರ್ಷ ವಯಸ್ಸಿನ ಪುರುಷ ಪ್ರಾಂಶುಪಾಲರು / ಉಪನ್ಯಾಸಕರು | ವಿದ್ಯಾರ್ಥಿ ಸಾಧನೆಯ ಟ್ರ್ಯಾಕಿಂಗ್ ವ್ಯವಸ್ಥೆ (ವಿದ್ಯಾರ್ಥಿ ಸಾಧನಾ ಪಥ SATS) ಅಥವಾ ಇಲಾಖಾ ಜಾಲತಾಣದಲ್ಲಿ ಪ ರಿಶೀಲಿಸುವುದು |
| 7 | ಗರ್ಭಿಣಿ ಅಥವಾ ಒಂದು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಗು ಹೊಂದಿರುವ ಪ್ರಾಂಶುಪಾಲರು / ಉಪನ್ಯಾಸಕರು | ಜಿಲ್ಲಾ ವೈದ್ಯಕೀಯ ಮಂಡಳಿಯ ಪ್ರಮಾಣಪತ್ರ |

**12. ಕೋರಿಕೆ ವರ್ಗಾವಣೆ ಮತ್ತು ತಾರ್ಕಿಕ ವರ್ಗಾವಣೆಯಿಂದ ವಿನಾಯಿತಿಗಾಗಿ ಅರ್ಜಿಯನ್ನು ಆಹ್ವಾನಿಸುವುದು .** ಕನಿಷ್ಠ ಸೇವಾವಧಿಯನ್ನು ಪೂರ್ಣ ಗೊಳಿಸಿದ ಪ್ರತಿಯೊಬ್ಬ ಪ್ರಾಂಶುಪಾಲರು/ ಉಪನ್ಯಾಸಕರು ಕೋರಿಕೆ ವರ್ಗಾವಣೆಗಾಗಿ ಮತ್ತು ತಾರ್ಕಿಕ ವರ್ಗಾವಣೆ ವಿನಾಯಿತಿಗಾಗಿ ಆನ್ ಲೈನ್ ಅರ್ಜಿಯನ್ನು ವರ್ಗಾವಣೆ ಪ್ರಕ್ರಿಯೆ ನಿಯಂತ್ರಣಾಧಿಕಾರಿ ಅಧಿಸೂಚನೆ ನೀಡಲಾದ ಸಮಯದ ಮಿತಿಯೊಳಗೆ ಸಲ್ಲಿಸಲು ಅವಕಾಶವನ್ನು ನೀಡುವುದು.

(i) ಪ್ರಾಂಶುಪಾಲರು / ಉಪನ್ಯಾಸಕರು ಕೋರಿಕೆ ವರ್ಗಾವಣೆಗೆ ಅರ್ಜಿಯನ್ನು ಸಲ್ಲಿಸುವ ಸಂದರ್ಭದಲ್ಲಿ ಯಾವುದೇ ವರ್ಗಗಳ ಅಡಿಯಲ್ಲಿ ಆದ್ಯತೆಯನ್ನು ಬಯಸಿ/ಕೋರಿ ನಿಯಮ 11 ರ ಅಡಿಯಲ್ಲಿ ಸ್ಪಷ್ಟಪಡಿಸಿದ ಸೂಕ್ತ ದಾಖಲೆಗಳೊಂದಿಗೆ ಕಾಯಿದೆ ಭಾಗ 10ರಂತೆ ಅರ್ಜಿಯನ್ನು ಸಲ್ಲಿಸಲು ಅವಕಾಶ ನೀಡುವುದು.

(ii) ನಿಯಮ 11 ರಲ್ಲಿ ನಿರ್ದಿಷ್ಟಪಡಿಸಿದ ಸಂಬಂಧಿತ ದಾಖಲೆಗಳೊಂದಿಗೆ ತಾರ್ಕಿಕ ವರ್ಗಾವಣೆ ವಿನಾಯಿತಿಗಾಗಿ ಆನ್ ಲೈನ್‌ನಲ್ಲಿ ಅರ್ಜಿಯನ್ನು ಸಲ್ಲಿಸುವುದು (ಹಕ್ಕೊತ್ತಾಯಿಸುವುದು).

(iii) ಸಮಯ ಮಿತಿಯೊಳಗೆ ಆದ್ಯತೆ ಅಥವಾ ವಿನಾಯಿತಿಯ ಹಕ್ಕೊತ್ತಾಯಿಸದಿದ್ದರೆ ಅದನ್ನು ನಂತರದಲ್ಲಿ ಪರಿಗಣಿಸಲಾಗುವುದಿಲ್ಲ. ಮತ್ತು

(iv) ತಾರ್ಕಿಕ ವರ್ಗಾವಣೆ ಅಡಿಯಲ್ಲಿ ಗುರುತಿಸಲಾದ ಪ್ರಾಂಶುಪಾಲರು /ಉಪನ್ಯಾಸಕರು

ಸಹ ಕೋರಿಕೆ ವರ್ಗಾವಣೆಗೆ ಅರ್ಜಿ ಸಲ್ಲಿಸಬಹುದು . ಅವರ ಅರ್ಹತೆ ಮತ್ತು ಅರ್ಹತಾದಾಯಕ ಅಂಕಗಳನ್ನು ಅವರು ಕೆಲಸ ಮಾಡುವ ಕಾಲೇಜಿನ ಆಧಾರದ ಮೇಲೆ ತಾರ್ಕಿಕ ವರ್ಗಾವಣೆಗೆ ಮೊದಲು ಪರಿಗಣಿಸಲಾಗುತ್ತದೆ.

**13. ವಿನಾಯಿತಿ ನೀಡಬೇಕಾದ ಪ್ರಾಂಶುಪಾಲರು /ಉಪನ್ಯಾಸಕರ ಮತ್ತು ಆದ್ಯತೆ ನೀಡಬೇಕಾದ ಪ್ರಾಂಶುಪಾಲರು /ಉಪನ್ಯಾಸಕರ ಪಟ್ಟಿ ಅಂತಿಮಗೊಳಿಸುವುದು .**

(i) ಜಂಟಿ ನಿರ್ದೇಶಕರು (ಆಡಳಿತ), ಪದವಿ ಪೂರ್ವ ಶಿಕ್ಷಣ ಇಲಾಖೆ ಇವರು ವರ್ಗಾವಣೆ ಅರ್ಜಿ ಸಲ್ಲಿಸಲು ನೀಡಿದ್ದ ಅಂತಿಮ ದಿನದ ನಂತರ ಆದ್ಯತೆ ಅಥವಾ ವಿನಾಯಿತಿಯ ಪ್ರತಿ ಅರ್ಜಿಯನ್ನು ಪರಿಶೀಲಿಸುತ್ತಾರೆ.

(ii) ಜಂಟಿ ನಿರ್ದೇಶಕರು (ಆಡಳಿತ), ಪದವಿ ಪೂರ್ವ ಶಿಕ್ಷಣ ಇಲಾಖೆ ಇವರು ನಿಯಮ 11 ರ ಅಡಿಯಲ್ಲಿ ನಿರ್ದಿಷ್ಟಪಡಿಸಿದ ದಾಖಲೆಗಳ ಆಧಾರದ ಮೇಲೆ ಆದ್ಯತೆಯ ಅಥವಾ ವಿನಾಯಿತಿಯ ಅರ್ಹ ಪ್ರಕರಣಗಳ ತೀರ್ಮಾನಕ್ಕೆ ಬರುತ್ತಾರೆ.

(iii) ಜಂಟಿ ನಿರ್ದೇಶಕರು (ಆಡಳಿತ), ಪದವಿ ಪೂರ್ವ ಶಿಕ್ಷಣ ಇಲಾಖೆ ಇವರು ದಾಖಲೆಗಳ ಸತ್ಯಾಸತ್ಯತೆ ಅಥವಾ ನೈಜತೆ ಬಗ್ಗೆ ಯಾವುದೇ ಸಂದೇಹಗಳಿದ್ದರೆ, ಸಕ್ಷಮ ಪ್ರಾಧಿಕಾರದೊಂದಿಗೆ ಪರಿಶೀಲಿಸುವುದು.

(iv) ಜಂಟಿ ನಿರ್ದೇಶಕರು (ಆಡಳಿತ), ಪದವಿ ಪೂರ್ವ ಶಿಕ್ಷಣ ಇಲಾಖೆ ಇವರು ಆನ್‌ಲೈನ್‌ನಲ್ಲಿ ಹಾಗೂ ಕಛೇರಿ ಸೂಚನಾ ಫಲಕದಲ್ಲಿ

(ಎ) ಅರ್ಹ ಆದ್ಯತೆ ಪಟ್ಟಿಯ ಕರಡನ್ನು ಪ್ರಕಟಿಸುವುದು.

(ಬಿ) ಆದ್ಯತೆ ಪಡೆಯುವಲ್ಲಿ ಅನರ್ಹಗೊಂಡವರ ಪಟ್ಟಿಯ ಕರಡನ್ನು ಸಕಾರಣಗಳೊಂದಿಗೆ ಪ್ರಕಟಿಸುವುದು;

(ಸಿ) ವಿನಾಯಿತಿ ಪಡೆದ ಅರ್ಹರ ಪಟ್ಟಿಯ ಕರಡನ್ನು ಪ್ರಕಟಿಸುವುದು . ವಿನಾಯಿತಿ ಪಡೆಯುವಲ್ಲಿಅನರ್ಹಗೊಂಡವರ ಪಟ್ಟಿಯ ಕರಡನ್ನು ಸಕಾರಣಗಳೊಂದಿಗೆ ಪ್ರಕಟಿಸುವುದು,

(ಇ) ಯಾವುದೇ ಪ್ರಾಂಶುಪಾಲರು / ಉಪನ್ಯಾಸಕರು ಆಕ್ಷೇಪಣೆಗಳನ್ನು ಸಲ್ಲಿಸಲು ಐದು ಕೆಲಸದ ದಿನಗಳನ್ನು ನೀಡುವುದು,

(ಎಫ್) ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಅವರು ಆಕ್ಷೇಪಣೆಗಳನ್ನು ಆಲಿಸಲು ಮುಕ್ತ ವಿಚಾರಣೆಯ ದಿನಾಂಕವನ್ನು ನಿಗದಿಪಡಿಸಿ ಪ್ರಕಟಿಸುವುದು ಮತ್ತು

(ಜಿ) ಐದು ಕೆಲಸದ ದಿನಗಳ ಗಡುವಿನ ನಂತರ ಪ್ರಾಂಶುಪಾಲರು| ಉಪನ್ಯಾಸಕರ ಅರ್ಹತಾದಾಯಕ ಮೇಲೆ ಅಂಕಗಳ ಯಾವುದೇ ಆಕ್ಷೇಪಣೆಗಳನ್ನು ಸ್ವೀಕರಿಸಲಾಗುವುದಿಲ್ಲ.

(v) ಅರ್ಹ ಅಥವಾ ಅನರ್ಹ ಪ್ರಕರಣಗಳಿಗೆ ಸಂಬಂದಿಸಿದಂತೆ ಯಾವುದೇ ಆಕ್ಷೇ ಪಣೆಯನ್ನು ಯಾವುದೇ ಪ್ರಾಂಶುಪಾಲರು / ಉಪನ್ಯಾಸಕರು ಸೂಕ್ತ ದಾಖಲೆಗಳೊಂದಿಗೆ ಆನ್ ಲೈನ್ ಆಕ್ಷೇಪಣೆಯನ್ನು ಸಲ್ಲಿಸಬಹುದು.

(vi) ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ಅಥವಾ ಜಂಟಿ ನಿರ್ದೇಶಕರ ಶ್ರೇಣಿಗಿಂತ ಕಡಿಮೆಯಿಲ್ಲದ ಅಧಿಕಾರಿ .ಎಲ್ಲಾ ಆನ್ ಲೈನ್ ಆಕ್ಷೇಪಣೆಗಳನ್ನು ಪರಿಶೀಲಿಸಬೇಕು ಮತ್ತು ಅವುಗಳನ್ನು 'ಮುಕ್ತ ಆಲಿಕೆ 'ಯ ದಿನಾಂಕದಂದು ಆಲಿಸಿ ಮತ್ತು ಮುಕ್ತ ಆದೇಶಗಳನ್ನು ನೀಡಬೇಕು. ಮತ್ತು ಈ ಆದೇಶಗಳನ್ನು ಇಲಾಖೆಯ ಜಾಲತಾಣದ ವ ರ್ಗಾವಣೆ ತಾಣದಲ್ಲಿ (ಪೋರ್ಟಲ್ ನಲ್ಲಿ) ಮತ್ತು ಸೂಚನಾ ಫಲಕದಲ್ಲಿ ಪ್ರಕಟಿಸಬೇಕು.

(vii)ಈ ಆದೇಶಗಳನ್ನು ಪ್ರಕಟಿಸಿದ ನಂತರ ಜಂಟಿ ನಿರ್ದೇಶಕರು (ಆಡಳಿತ)

(ಎ)ಅಂತಿಮ ಆದ್ಯತಾ ಪಟ್ಟಿ ಮತ್ತು

(ಬಿ)ಅಂತಿಮ ವಿನಾಯಿತಿ ಪಟ್ಟಿ, ಪ್ರಕಟಿಸಬೇಕು;

(viii) ಈ ಆದೇಶದಿಂದ ಬಾಧಿತರಾದ ಯಾವುದೇ ಪ್ರಾಂಶುಪಾಲರು / ಉಪನ್ಯಾಸಕರು ಆದೇಶವನ್ನು ಪ್ರಕಟಿಸಿದ ದಿನಾಂಕದಿಂದ ಮೂರು ಕೆಲಸದ ದಿನಗಳೊಳಗೆ ಕಾಯ್ದೆ ಭಾಗ 9 ರ ಪ್ರಕಾರ ಕುಂದುಕೊರತೆ ಪರಿಹಾರ ಸಮಿತಿಯನ್ನು ಸಂಪರ್ಕಿಸಬಹುದು .

**14. ತಾರ್ಕಿಕ ವರ್ಗಾವಣೆಯಡಿಯಲ್ಲಿ ವರ್ಗಾವಣೆ ಮಾಡಬೇಕಾದ ಉಪನ್ಯಾಸಕರ ಅಂತಿಮ ಪಟ್ಟಿಯನ್ನು ತಯಾರಿಸಿ ಪ್ರಕಟಿಸುವುದು** .(1) ತಾರ್ಕಿಕ ವರ್ಗಾವಣೆಯಡಿಯಲ್ಲಿ ವಿನಾಯಿತಿ ಪಡೆಯುವ ಉಪನ್ಯಾಸಕರ ಪಟ್ಟಿಯನ್ನು ಅಂತಿಮಗೊಳಿಸಿದ ನಂತರ , ಆ ಕಾಲೇಜಿನಲ್ಲಿ ಆ ವಿಷಯದ ಹಿರಿಯ ಉಪನ್ಯಾಸಕರನ್ನು ವರ್ಗಾವಣೆಗೆ ಪರಿಗಣಿಸಲಾಗುವುದು ಹಾಗು ಉಳಿದ ಉಪನ್ಯಾಸಕರಿಗೆ ವಿನಾಯಿತಿ ನೀಡುವುದು. ಆ ವಿಷಯದ ಎಲ್ಲಾ ಉಪನ್ಯಾಸಕರು ವಿನಾಯಿತಿಗೆ ಅರ್ಹರಾಗಿದ್ದರೆ ವಿನಾಯಿತಿ ಷರತ್ತನ್ನು ಲೆಕ್ಕಿಸದೆ ಗಂಭೀರ ಅನಾರೋಗ್ಯ ಅಥವಾ ದೈಹಿಕ ಅಸಾಮರ್ಥ್ಯ ಹೊಂದಿರುವ ಉಪನ್ಯಾಸಕರನ್ನು ಹೊರತುಪಡಿಸಿ ಹಿರಿಯ ಎಲ್ಲಾ ಉಪನ್ಯಾಸಕರನ್ನುಪರಿಗಣಿಸಲಾಗುತ್ತದೆ.

(2) ಉಪ-ನಿಯಮ (1) ರಲ್ಲಿ ನಿಗದಿಪಡಿಸಿದ ಕಾರ್ಯವಿ ಧಾನವನ್ನು ಅನುಸರಿಸಿದ ನಂತರ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ಇವರು ತಾರ್ಕಿಕ ವರ್ಗಾವಣೆಯಡಿಯಲ್ಲಿ ಮಾಡಬೇಕಾದ ಉಪನ್ಯಾಸಕರ ಅಂತಿಮ ಪಟ್ಟಿಯನ್ನು ಪ್ರಕಟಿಸುವುದು .

**15. ತಾರ್ಕಿಕ ವರ್ಗಾವಣೆಯಡಿಯ ಲ್ಲಿ ಉಪನ್ಯಾಸಕರ ತರ್ಕಬದ್ಧಗೊಳಿಸುವಿಕೆ .** (1) ತರ್ಕಬದ್ಧಗೊಳಿಸುವಿಕೆಯ ಅಡಿಯಲ್ಲಿ ಉಪನ್ಯಾಸಕರ ವರ್ಗಾವಣೆಗೆ ಆದ್ಯತೆಯ ಕ್ರಮವನ್ನು ಅನುಸರಿಸುವುದು.

(2) ತರ್ಕಬದ್ಧತೆಯ ಅಂತಿಮ ಪಟ್ಟಿಯಲ್ಲಿರುವ ಉಪನ್ಯಾಸಕರನ್ನು ಸಿ ವಲಯದಲ್ಲಿ ಲಭ್ಯವಿರುವ ಖಾಲಿ ಹುದ್ದೆಗಳಿಗೆ ವರ್ಗಾಯಿಸಲಾಗುತ್ತದೆ . ಯಾವುದೇ ಉಪನ್ಯಾಸಕರು ಖಾಲಿ ಹುದ್ದೆಯನ್ನು ತೆಗೆದುಕೊಳ್ಳಲು ನಿರಾಕರಿಸಿದರೆ ಅಥವಾ ವರ್ಗಾವಣೆ ಪ್ರಕ್ರಿಯೆಯಿಂದ ದೂರವಿದ್ದರೆ, ಸಮಾಲೋಚನಾ ವರ್ಗಾವಣೆ (ಕೌನ್ಸೆಲಿಂಗ್) ಪ್ರಕ್ರಿಯೆ ಮುಗಿದ ನಂತರ ವರ್ಗಾವಣೆ ಪ್ರಾಧಿಕಾರವು ಅಂತಹ ಉಪನ್ಯಾಸಕರನ್ನು ನೆಪಮಾತ್ರ (ಡಮ್ಮಿ) ಸಮಾಲೋಚನಾ ವರ್ಗಾವಣೆ ಮೂಲಕ ವರ್ಗಾಯಿಸುತ್ತದೆ.

(3) ಗಂಭೀರ ಅನಾರೋಗ್ಯ ಅಥವಾ ದೈಹಿಕ ಅಸಾಮರ್ಥ್ಯತೆಯ ಉಪನ್ಯಾಸಕರನ್ನು ಹೆಚ್ಚುವರಿ ಎಂದು ಗುರುತಿಸಿದರೆ , ಅಂತಹ ಉಪನ್ಯಾಸಕರನ್ನು ವರ್ಗಾವಣೆ ಮಾಡುವಾಗ ವರ್ಗಾವಣೆ ಮಾಡುವ ಪ್ರಾಧಿಕಾರವು ಅವರಿಗೆ ಅರ್ಹತಾ ಅಂಕಗಳನ್ನು ಲೆಕ್ಕಿಸದೆ ವರ್ಗಾವಣೆಯಲ್ಲಿ ಮೊದಲ ಆದ್ಯತೆಯನ್ನು ನೀಡುವುದು.

**16. ಪರಿಷ್ಕೃತ ಖಾಲಿ ಹುದ್ದೆಗಳ ಪ್ರಕಟಣೆ .** ತಾರ್ಕಿಕ ವರ್ಗಾವಣೆ ಮಾಡುವ ವರ್ಷದಲ್ಲಿ , ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇ ಲಾಖೆ, ಇವರು ತರ್ಕಬದ್ಧ ಪ್ರಕ್ರಿಯೆಯ ನಂತರ ವಿಷಯವಾರು ಖಾಲಿ ಹುದ್ದೆಗಳನ್ನು ಪ್ರಕಟಿಸಬೇಕು.

**17. ಸಾಮಾನ್ಯ ಕೋರಿಕೆ ವರ್ಗಾವಣೆಗಳು ,** ಕೋರಿಕೆ ವರ್ಗಾವಣೆಗಾಗಿ ಸ್ವೀಕರಿಸಿದ ಅರ್ಜಿಗಳ ಆಧಾರದ ಮೇಲೆ , ವರ್ಗಾವಣೆ ಕಾಯಿದೆಯ ಭಾಗ 10 ರನ್ವಯ ಮತ್ತು ಸಾಮಾನ್ಯ ವರ್ಗದ ಅಡಿಯಲ್ಲಿ ನಿರ್ದಿಷ್ಟಪಡಿಸಿದ ವಿವಿಧ ವರ್ಗಗಳಿಗೆ ಅಂತಿಮ ಆದ್ಯತೆಯ ಪಟ್ಟಿಯನ್ನು ಮತ್ತು ಸಾಮಾನ್ಯ ವರ್ಗದ ಪಟ್ಟಿಯನ್ನು ಸಕ್ಷಮ ಪ್ರಾಧಿಕಾರವು ಸಿದ್ಧಪಡಿಸಿ ಇಲಾಖಾ ವರ್ಗಾವಣೆ ತಾಣ/ಪೋರ್ಟಲ್‌ನಲ್ಲಿ ಪ್ರಕಟಿಸುತ್ತದೆ

(ii) ವರ್ಗಾವಣೆ ಕಾಯಿದೆಯ ಭಾಗ 10 ರನ್ವಯ ಆದ್ಯತೆಗಾಗಿ ಸೂಚಿಸಲಾದ ಷರತ್ತುಗಳ ಆಧಾರದ ಮೇಲೆ ಪ್ರತಿವರ್ಗದೊಳಗೆ ಆದ್ಯತೆಯನ್ನು ನಿರ್ಧರಿಸಲಾಗುತ್ತದೆ.

(iii) ಭಾಗ 10 ರ ಷರತ್ತು (v) ಅಡಿಯಲ್ಲಿ ನಿರ್ದಿಷ್ಟಪಡಿಸಿದ ಕೋರಿಕೆ ವರ್ಗಾವಣೆಗಳ ಒಟ್ಟು ಸಂಖ್ಯೆ ಮತ್ತು ಸಾಮಾನ್ಯ ವರ್ಗಾವಣೆಗಳು ನಿಯಮ 5 ರ ಅಡಿಯಲ್ಲಿ ನಿರ್ದಿಷ್ಟಪಡಿಸಿದ ವರ್ಗಾವಣೆ ಮಿತಿಯೊಳಗೆ ಇರಬೇಕು

(iv) ವರ್ಗಾವಣೆಗಳ ಸಮಾಲೋಚನೆಯನ್ನು /ಕೌನ್ಸೆಲಿಂಗ್ ಅನ್ನು ವರ್ಗಾವಣೆ ಕಾಯ್ದೆ ಭಾಗ 10 ರ ಉಪ -ವಿಭಾಗ (1) ರ (i) ರಿಂದ (v)ರ ಅನುಕ್ರಮದಲ್ಲಿ ಮತ್ತು ಸಾಮಾನ್ಯ ವರ್ಗವನ್ನು ತೆಗೆದುಕೊಳ್ಳಲಾಗುತ್ತದೆ.

(v) ವರ್ಗಾವಣೆಗಳ ಸಮಾಲೋಚನೆಯಲ್ಲಿ ಹಾಜರಾಗುವ ಪ್ರಾಂಶುಪಾಲರು ಅವರು /ಅವಳು ಕಲಿಸಿದ ವಿಷಯವು ಇರುವಂತಹ ಕಾಲೇಜಿನಲ್ಲಿ ಖಾಲಿ ಹುದ್ದೆಯನ್ನು ಆಯ್ಕೆ ಮಾಡಬಹುದು . ಅಂತಹ ಖಾಲಿ ಹುದ್ದೆ ಲಭ್ಯವಿಲ್ಲದಿದ್ದರೆ , ಅವನು/ಅವಳು ಯಾವುದೇ ಖಾಲಿ ಹುದ್ದೆಯನ್ನು ಆಯ್ಕೆ ಮಾಡಬಹುದು. ವರ್ಗಾವಣೆಗಳ ಸಮಾಲೋಚನೆಯಲ್ಲಿ ಹಾಜರಾಗುವ ಉಪನ್ಯಾಸಕರು ಯಾವುದೇ ಖಾಲಿ ಹುದ್ದೆಯನ್ನು ಆಯ್ಕೆ ಮಾಡಬಹುದು . ವರ್ಗಾವಣೆ ಮಾಡುವ ಪ್ರಾಧಿಕಾರವು ವರ್ಗಾವಣೆಗೆ ಸಮಾಲೋಚನೆಯ ಕೇಂದ್ರದಲ್ಲಿಯೇ /ಸ್ಥಳದಲ್ಲಿಯೇ ಕಂಪ್ಯೂಟರ್ ಮುದ್ರಿತ ವರ್ಗಾವಣೆ ಆದೇಶವನ್ನು ನೀಡಬಹುದು . ಯಾವುದೇ ಸೂಕ್ತ ವಾದ ಖಾಲಿ ಹುದ್ದೆ ಲಭ್ಯವಿಲ್ಲದಿದ್ದರೆ ಪ್ರಾಂಶುಪಾಲರು / ಉಪನ್ಯಾಸಕರು ಪ್ರ ಸ್ತುತ ಕರ್ತವ್ಯ ನಿರ್ವ ಹಿಸುತ್ತಿರುವ ಹುದ್ದೆಯಲ್ಲಿ ಮುಂದುವರಿಯಲು ಆಯ್ಕೆ ಮಾಡಬಹುದು . ಈ ಕುರಿತು ಪ್ರಾಂಶುಪಾಲರು / ಉಪಾನ್ಯಾಸಕರಿಂದ ಮುಚ್ಚಳಿಕೆಯನ್ನು ವರ್ಗಾವಣೆ ಪ್ರಾಧಿಕಾರವು ವರ್ಗಾವಣೆಗಳ ಸಮಾಲೋಚನೆಯ ಕೇಂದ್ರದಲ್ಲಿಯೇ/ಸ್ಥಳದಲ್ಲಿಯೇ ತೆಗೆದುಕೊಳ್ಳುತ್ತದೆ . ಆದಾಗ್ಯೂ, ಖಾಲಿ ಹುದ್ದೆಯನ್ನು ಒಮ್ಮೆ ಆಯ್ಕೆ ಮಾಡಿದರೆ ಅದನ್ನು ಮಾರ್ಪಡಿಸಲಾಗುವುದಿಲ್ಲ ಅಥವಾ ರದ್ದುಗೊಳಿಸಲಾಗುವುದಿಲ್ಲ.

(vi) ಸಮಾಲೋಚನೆ/ಕೌನ್ಸೆಲಿಂಗ್ ಪ್ರಕ್ರಿಯೆಯನ್ನು ಪ್ರಾಂಶುಪಾ ಲರು ಮತ್ತು ಉಪನ್ಯಾ ಸಕರಿಗೆ ಪ್ರತ್ಯೇಕವಾಗಿ ನಡೆಸಲಾಗುವುದು.

**18. ವರ್ಗಾವಣೆಗಳ ಪ್ರಕ್ರಿಯೆ /ನಡವಳಿಕೆ.** ಎಲ್ಲಾ ವರ್ಗಾವಣೆಗಳನ್ನು ಆನ್ ಲೈನ್ ಗಣಕೀಕೃತ ಸಮಾಲೋಚನೆ ಪ್ರಕ್ರಿಯೆ ಮೂಲಕ ಮಾತ್ರ ಕೈಗೊಳ್ಳ ಲಾಗುತ್ತದೆ.

**19. ಸಮಾಲೋಚನೆಯ ಮುಕ್ತಾಯ** . ಗಣಕೀಕೃತ ಸಮಾಲೋಚನೆ ಮೂಲಕ ನಡೆಯುವ ಕೋರಿಕೆ ವರ್ಗಾವಣೆಯ ಪ್ರಕ್ರಿಯೆಯು ವರ್ಗಾವಣೆ ಕಾಯ್ದೆ ನಿಯಮ 5 ರ ಅಡಿಯಲ್ಲಿ ವರ್ಗಾವಣೆಗಳ ಗರಿಷ್ಠ ಮಿತಿಯನ್ನು ತಲುಪುವವರೆಗೆ ಅಥವಾ ಎಲ್ಲಾ ಅರ್ಜಿದಾರರು ವರ್ಗಾವಣೆ ಪ್ರಕ್ರಿಯೆಯಲ್ಲಿ ಆಯ್ಕೆಗೆ ಆವಕಾಶ ಪಡೆದು ಯಾವುದೇ ಅರ್ಜಿದಾರ ವರ್ಗಾವಣೆ ಪ್ರಕ್ರಿಯೆಯಲ್ಲಿ ಬಾಕಿ ಉಳಿಯದಿರುವವರೆಗೆ ನಿಯಂತ್ರಣ ಅಧಿಕಾರಿಯು ತಿಳಿಸುವ ಸಮಯದವರೆಗೆ ಮುಂದುವರೆಯುವುದು.

**20.ಪರಸ್ಪರ ವರ್ಗಾವಣೆಗಳು.**

**(i) ಅರ್ಹತೆ:**

(ಎ) ಕನಿಷ್ಠ ಏಳು ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿರಬೇಕು.

(ಬಿ)ನಿವೃತ್ತಿಗೆ ಕನಿಷ್ಠ ಐದು ವರ್ಷಗಳ ಸೇವೆಯು ಬಾಕಿ ಇರಬೇಕು .

(ಸಿ)ಈ ಮೊದಲು ಪರಸ್ಪರ ವರ್ಗಾವಣೆಯನ್ನು ಪಡೆದಿರಬಾರದು .

(ಡಿ) ಪರಸ್ಪರ ವರ್ಗಾವಣೆಯನ್ನು ಬಯಸುತ್ತಿರುವ ಪ್ರಾಂಶುಪಾಲರು/ಉಪನ್ಯಾಸಕರು ಇಬ್ಬರೂ ವರ್ಗಾವಣೆ ತಾಣ/ಪೋರ್ಟಲ್‌ನಲ್ಲಿ ನಿಗದಿತ ಸಮಯದೊಳಗೆ ವರ್ಗಾವಣೆ ಪ್ರಕ್ರಿಯೆ ನಿಯಂತ್ರಣಾಧಿಕಾರಿಯು ನಿರ್ದಿಷ್ಟಪಡಿಸಿದ ರೀತಿಯಲ್ಲಿ ಹಾಗು ತಮ್ಮ ಅರ್ಜಿಗಳನ್ನು KGID ಸಂಖ್ಯೆಗಳ ಮೂಲಕ ಲಿಂಕ್ ಮಾಡಿ ಅರ್ಜಿ ಸಲ್ಲಿಸಬೇಕು .

(ii) ಸಕ್ಷಮ ಪ್ರಾಧಿಕಾರವು ಅರ್ಹ ಪ್ರಕರಣಗಳ ಅಂತಿಮ ಪಟ್ಟಿಯನ್ನು ಪ್ರಕಟಿಸುತ್ತದೆ .

(iii) ಪ್ರಾಂಶುಪಾಲರು/ಉಪನ್ಯಾಸಕರು, ಅವರ ಸೇವಾವಧಿಯಲ್ಲಿ ಒಮ್ಮೆ ಮಾತ್ರ ಪರಸ್ಪರ ವರ್ಗಾವಣೆಯನ್ನು ಪಡೆಯಬಹುದು.

**21. ಆದೇಶಗಳ ವಿತರಣೆ** . ವರ್ಗಾವಣೆ ಪ್ರಾಧಿಕಾರವು ವರ್ಗಾವಣೆ ಸಮಾಲೋಚನಾ /ಕೌನ್ಸೆಲಿಂಗ್‌ನ ದಿನದಂದೇ ಸಂಬಂಧಪಟ್ಟ ಪ್ರಾಂಶುಪಾಲರು /ಉಪನ್ಯಾಸಕರಿಗೆ ಗಣಕಯಂತ್ರ/ಕಂಪ್ಯೂಟರ್ ಮುದ್ರಿತ ವರ್ಗಾವಣೆ ಆದೇಶವನ್ನು ನೀಡಬಹುದು .

**22. ಸೂಚನಾ ಫಲಕದಲ್ಲಿ ಪ್ರಕಟಣೆ** . ಪ್ರತಿಯೊಂದು ರೀತಿಯ ವರ್ಗಾವಣೆಯನ್ನು ಪೂರ್ಣಗೊಳಿಸಿದ ನಂತರ ವರ್ಗಾವಣೆಗೊಂಡ ಪ್ರಾಂಶುಪಾಲರು /ಉಪನ್ಯಾಸಕರ ಪಟ್ಟಿಯನ್ನು ಅವರ ಹೆಸರಿನ ಮುಂದೆ ವರ್ಗಾವಣೆಗೊಂಡ ಸ್ಥಳಗಳನ್ನು ಸೂಚಿಸಿ ಸೂಚನಾ ಫಲಕದಲ್ಲಿ ಪ್ರಕಟಿಸುವುದು. ಪಟ್ಟಿಯನ್ನು ಪ್ರಕಟಿಸಿದ ನಂತರ ಯಾವುದೇ ವರ್ಗಾವಣೆಯನ್ನು ಮಾಡುವಂತಿಲ್ಲ.

**23. ಅಧಿಕಾರಿಗಳ ಹೊಣೆಗಾರಿಕೆ ,** ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರವು ವರ್ಗಾವಣೆಗಳನ್ನು ನಡೆಸುವಾಗ ವರ್ಗಾವಣೆ ನಿಯಮಗಳ ನಿಬಂಧನೆಗಳನ್ನು ಪಾಲಿಸಲಾಗಿದೆಯೆ ಎಂದು ಖಚಿತಪಡಿಸಿಕೊಳ್ಳಬೇಕು. ಮತ್ತು ಯಾವುದೇ ವ್ಯತ್ಯಾಸಗಳಿಗೆ ಅವರು ವಯಕ್ತಿಕವಾಗಿ ಜವಾಬ್ದಾರರಾಗಿರುತ್ತಾರೆ ಮತ್ತು ಅಂತಹ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮವನ್ನು ತೆಗೆದುಕೊಳ್ಳಲಾಗುತ್ತದೆ.

**24. ಸಾಮಾನ್ಯ ವರ್ಗಾವಣೆಗಳ ನಂತರ ವರ್ಗಾವಣೆಗಳು** , ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಇವರು ಈ ಕೆಳಗಿನ ಸಂದರ್ಭಗಳಲ್ಲಿ ಮಾತ್ರ ಶೈಕ್ಷಣಿಕ ವರ್ಷದಲ್ಲಿ ಪ್ರಾಂಶುಪಾಲರು/ಉಪನ್ಯಾಸಕರ ವರ್ಗಾವಣೆಗೆ ಅಧಿಕಾರ ಹೊಂದಿರುತ್ತಾರೆ ಅವುಗಳೆಂದರೆ:

(i) ಶಿಸ್ತು ಕ್ರಮ ಬಾಕಿ ಇರುವಾಗ ಅಮಾನತಿಗೆ ಬದಲಾಗಿ ವರ್ಗಾವಣೆ,

(i) ಸಾಮಾನ್ಯ ವರ್ಗಾವಣೆಗಳನ್ನು ಪೂರ್ಣಗೊಳಿಸಿದ ನಂತರ, ನಿರ್ದಿಷ್ಟಪಡಿಸಿದ ಯಾವುದೇ ಹುದ್ದೆಗಳು ಖಾಲಿ ಇದ್ದರೆ, ನಿಯಮ-25 ರಲ್ಲಿ ಉಲ್ಲೇಖಿಸಿದಂತೆ ಸರ್ಕಾರವು ಅರ್ಹ ಪ್ರಾಂಶುಪಾಲರು / ಉಪನ್ಯಾಸಕರನ್ನು ಪೋಸ್ಟ್ ಮಾಡಬಹುದು; ಮತ್ತು

(iii) ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣಇಲಾಖೆ,ಇಲ್ಲಿ ಸಹಾಯಕ ನಿರ್ದೇಶಕರ ಹುದ್ದೆಗಳು.

**25. ಯಾವುದೇ ಉಪನ್ಯಾಸಕರು ಆಯ್ಕೆ ಮಾಡದ ಸ್ಥಳಗಳಿಗೆ ಅಗತ್ಯವಿದ್ದಲ್ಲಿ ಸಾರ್ವಜನಿಕ ಹಿತಾಸಕ್ತಿ ವರ್ಗಾವಣೆಗಳು ,** ಸಾಮಾನ್ಯ ವರ್ಗಾವಣೆಗಳು ಪೂರ್ಣಗೊಂಡ ನಂತರ , ಯಾವುದೇ ಉಪನ್ಯಾಸಕರು ಸಮಾಲೋಚನಾ ವರ್ಗಾವಣೆ/ಕೌನ್ಸೆಲಿಂಗ್ ಪ್ರಕ್ರಿಯೆಯಲ್ಲಿ ಸ್ಥಾನವನ್ನು ಆಯ್ಕೆ ಮಾಡಿಕೊಳ್ಳದಿದ್ದಲ್ಲಿ ಮತ್ತು ಅದನ್ನು ವಿದ್ಯಾರ್ಥಿ ಉಪನ್ಯಾಸಕರ ಅನುಪಾತ ಮತ್ತು ಸಾರ್ವಜನಿಕ ಹಿತಾಸಕ್ತಿಯ ಆಧಾರದ ಮೇಲೆ ಭರ್ತಿ ಮಾಡ ಬೇಕಾಗುತ್ತದೆ. ರಾಜ್ಯ ಸರ್ಕಾರವು ಕನಿಷ್ಟ ಸೇವಾವಧಿಯನ್ನು ಪೂರ್ಣಗೊಳಿಸಿದ ಯಾವುದೇ ಉಪನ್ಯಾಸಕರನ್ನು ಅಂತಹ ಸ್ಥಳಕ್ಕೆ ಕೆಳಗಿನ ಷರತ್ತುಗಳಿಗೆ ಒಳಪಟ್ಟು ವರ್ಗಾಯಿಸಬಹುದು . ಕನಿಷ್ಠ ಸೇವಾ ಅವಧಿಯೆಂದರೆ ;

(i) ವಿದ್ಯಾರ್ಥಿ ಉಪನ್ಯಾಸಕರ ಅನುಪಾತದ ಆಧಾರದ ಮೇಲೆ ಹೆಚ್ಚುವರಿ ಉಪನ್ಯಾಸಕರನ್ನು ಹೊಂದಿರುವ ಕಾಲೇಜುಗಳಿಂದ ಮಾತ್ರ ಅಂತಹ ವರ್ಗಾವಣೆ ;

(ii) ಅಂತಹ ವರ್ಗಾವಣೆಯು ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಇವರ ಶಿಫಾರಸಿನ ಮೇರೆಗೆ ಇರುತ್ತದೆ;

(iii) ಸಕ್ಷಮ ಪ್ರಾಧಿಕಾರವು ಕೌನ್ಸೆಲಿಂಗ್ ಪ್ರಕ್ರಿಯೆಯಲ್ಲಿ ಯಾರೂ ಆಯ್ಕೆ ಮಾಡದ ಖಾಲಿ ಹುದ್ದೆಗಳ ಪಟ್ಟಿಯನ್ನು ಪ್ರಕಟಿಸಬೇಕು ಮತ್ತು ಸಾಮಾನ್ಯ ವರ್ಗಾವಣೆ ಪೂರ್ಣಗೊಂಡ ತಕ್ಷಣ ಈ ನಿಯಮದ ಅಡಿಯಲ್ಲಿ ವಿದ್ಯಾರ್ಥಿ ಉಪನ್ಯಾಸಕರ ಅನುಪಾತಕ್ಕೆ ಅನುಗುಣವಾಗಿ ಭರ್ತಿ ಮಾಡಬೇಕು. ಈ ನಿಯಮಕ್ಕೆ ಅನುಸಾರವಾಗಿ ಸಾಮಾನ್ಯ ವರ್ಗಾವಣೆಗಳನ್ನು ಪೂರ್ಣಗೊಳಿಸಿದ ನಂತರ ಸೂಚಿಸಲಾದ ಅಂತಹ ಖಾಲಿ ಹುದ್ದೆಗಳಿಗೆ ಸಕ್ಷಮ ಪ್ರಾಧಿಕಾರವು ವರ್ಗಾವಣೆಯನ್ನು ಮಾಡುತ್ತದೆ. ಮತ್ತು ಯಾವುದೇ ಉಲ್ಲಂಘನೆಯನ್ನು ಗಮನಿ ಸಿ ಗಂಭೀರವಾಗಿ ಪರಿಗಣಿಸಲಾಗುತ್ತದೆ ;

(iv) ಸಕ್ಷಮ ಪ್ರಾಧಿಕಾರವು ಅಂತಹ ಹೆಚ್ಚುವರಿ ಉಪನ್ಯಾಸಕರ ಅಂಕಿ-ಅಂಶಗಳನ್ನು ವಿಷಯವಾರು ಮತ್ತು ಕಾಲೇಜುವಾರು ನಿರ್ವಹಿಸಬೇಕು ಮತ್ತು ಪ್ರಕಟಿಸಬೇಕು, ಮತ್ತು

(v) ವಿದ್ಯಾರ್ಥಿಗಳ ಸಾಧನಾ ಪಥ/ಟ್ರ್ಯಾಕಿಂಗ್ ಸಿಸ್ಟಮ್ (SATS) ಮಾಹಿತಿ/ಡೇಟ ಮತ್ತು ಜಾಲ

ತಾಣದ ಮಾಹಿತಿಯನ್ನು/ಆನ್‌ಲೈನ್ ಪೋರ್ಟಲ್ ಡೇಟಾವನ್ನು ಮೌಲ್ಯಮಾಪನ ಮಾಡಲು ಬಳಸಲಾಗುವುದು.

**26.ರದ್ದತಿ ಮತ್ತು ಉಳಿತಾಯ .** ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಉಪನ್ಯಾಸಕರ ವರ್ಗಾವಣೆ ನಿಯಂತ್ರಣ ) ನಿಯಮಗಳು, 2017 ಅನ್ನು ಈ ಮೂಲಕ ರದ್ದುಗೊಳಿಸಲಾಗಿದೆ : ಪರಂತು, ಅಂತಹ ರದ್ದತಿಯು ಊರ್ಜಿತವಾಗುವುದಿಲ್ಲ,

ಎ) ಈ ನಿಯಮಗಳ ಅಡಿಯಲ್ಲಿ ಮಾಡಿದ ಯಾವುದೇ ಕ್ರಿಯೆ ಅಥವಾ ಯಾವುದೇ ಕ್ರಮ ಅಥವಾ

(ಬಿ) ಮೇಲೆ ತಿಳಿಸಿದ ನಿಯಮಗಳಿಗೂ ಮುನ್ನಿನ ಪ್ರಕ್ರಿಯೆ ಅಥವಾ ಯಾವುದೇ ಕಾರ್ಯಾಚರಣೆ ಅಥವಾ ಅದರ ಅಡಿಯಲ್ಲಿ ಅನುಭವಿಸಿದ ಯಾವುದೇ ಕ್ರಿಯೆ; ಅಥವಾ

(ಸಿ) ಹೇಳಲಾದ ನಿಯಮಗಳ ಅಡಿಯಲ್ಲಿ ಪಡೆದ, ಸಂಚಿತ ಅಥವಾ ಉಂಟಾದ ಯಾವುದೇಹಕ್ಕು, ಸವಲತ್ತು , ಬಾದೆ ಅಥವಾ ಹೊಣೆಗಾರಿಕೆ; ಅಥವಾ

(ಡಿ) ಹೇಳಿದ ನಿಯಮಗಳ ಅಡಿಯಲ್ಲಿ ಮಾಡಿದ ಯಾವುದೇ ಅಪರಾಧಕ್ಕೆ ಸಂಬಂದಿಸಿದಂತೆ ಉಂಟಾದ ಯಾವುದೇ ದಂಡ ಅಥವಾ ಶಿಕ್ಷೆ:

ಮುಂದುವರೆದು ಕರ್ನಾಟಕ ಸಾಮಾನ್ಯ ಷರತ್ತುಗಳ ಕಾಯಿದೆ, 1899 ರ (1899 ರ ಅಧಿನಿಯಮ |||) ವಿಭಾಗ 6 ರ ನಿಬಂಧನೆಗಳು ಮೇಲೆ ಹೇಳಿದ ನಿಯಮಗಳ ರದ್ದತಿಗೆ ಅನ್ವಯಿಸುತ್ತವೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಪದ್ಮನಿ.ಎಸ್.ಎನ್)**
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ಪದವಿಪೂರ್ವ)